
ಬೆವಿಕಂ
BESCOM

# ಬೆಸ್ಕಾಂ ಸ್ನೇಹಿ

ಬೆಂಗಳೂರು ವಿದ್ಯುತ್ ಸರಬರಾಜು ಕಂಪನಿ ನಿಯಮಿತ ಗೃಹಪತ್ರಿಕೆ

ಸಂಪುಟ-7, ಸಂಚಿಕೆ-4 ತ್ರೈಮಾಸಿಕ ಅಕ್ಟೋಬರ್-ಡಿಸೆಂಬರ್ 2020 ಪುಟಗಳು-12



# ಕಾಣದ ಕೊರೋಣ.... ಕೊಲ್ಲುತಾ ಸಾಗೋಣ ...?
## 'ಕೊರೋನಾ ಜಾಗೃತಿ ಗೀತೆ' ಸಿದ್ದಗಂಗಾಶ್ರೀಗಳಿಂದ ಬಿಡುಗಡೆ


ಶ್ರೀ ರವಿ




ಶ್ರೀ ಪ್ರಶಾಂತ್

**ಕಾಣದ ಕೊರೋನ....ಕೊಲ್ಲುತಾ ಸಾಗೋಣ...?**

**ಹಾಡನ್ನು ಕೇಳಲು ಈ ಲಿಂಕ್ ವೀಕ್ಷಿಸಿ https://youtu.be/rnXVDqHKCb4**

ತುಮಕೂರಿನ ಬೆವಿಕಂ ಸಹಾಯಕ ಕಾರ್ಯನಿರ್ವಾಹಕ ಇಂಜಿನಿಯರ್(ವಿ) ಆದ **ಶ್ರೀ ರವಿ** (ಹೆಚ್.ಟಿ ರೇಟಿಂಗ್) ಮತ್ತು ಸಹಾಯಕ ಇಂಜಿನಿಯರ್(ವಿ) ಆದ **ಶ್ರೀ ಪ್ರಶಾಂತ್** (ಎ.ಇ.ಟಿ, ಆರ್.ಎಸ್.ಡಿ) ರವರು ಹಾಡಿರುವ **'ಕೊರೋನಾ ಜಾಗೃತಿ ಗೀತೆ'** ಯನ್ನು ಸಿದ್ದಗಂಗಾಶ್ರೀಗಳಿಂದ ಬಿಡುಗಡೆಗೊಳಿಸಲಾಯಿತು.

ಹಾಡಿನ ಸಾಹಿತ್ಯ ಸ್ವತಃ ವೈದ್ಯರಾಗಿರುವ **ಡಾ|| ಭರತ್ ರಾಜ್** ಹಾಗೂ **ಶ್ರೀ ರವಿ ಆರ್** ಮತ್ತು ಸಂಗೀತ ನಿರ್ದೇಶನ **ಶ್ರೀ ಶ್ರೀನಿವಾಸ್** ರವರದ್ದು.







### ಹಾಡಿನ ಸಾಹಿತ್ಯ

ಕಣ್ಣಿಗೆ ಕಾಣದ ಕೊರೋನಾ
ಜಗವ ತಿನ್ನುತಿದೆ ನೋಡಣ್ಣ
ಬಡವನೆನ್ನದೆ, ಬಲ್ಲಿಗನೆನ್ನದೆ
ಕಾಡುತ ಸಾಗಿದೆ ಈ ಸೋಂಕು
ಈ ಹೆಮ್ಮಾರಿಯ ಕೊಲ್ಲಲು ನಾವು
ಪಣ ತೊಡಬೇಕು ತಡೆಯಲು ಸಾವು।

ಕೈ ಕುಲಕದಿರಿ, ಕೈ ಮುಗಿಯುತಿರಿ
ಪಾದವ ಮುಟ್ಟದೆ ಪ್ರಮಾಣವೆನ್ನಿರಿ
ಒಬ್ಬರಿಗೊಬ್ಬರು ಅಪ್ಪಿಕೊಳ್ಳದೇ....
ದೂರದಿಂದ ಶುಭವನು ಕೋರಿರಿ....
ಮಾಸ್ಕ್ ಧರಿಸದೇ ಹೊರಗೆ ಹೋಗದಿರಿ
ಜೊತೆಯಲಿ ನಡೆಯದೆ ಅಂತರವಿರಿಸಿರಿ

ಕಣ್ಣಿಗೆ ಕಾಣದ ಕ್ರಿಮಿಯೊಂದು
ಜನವ ತಿನ್ನುತಿದೆ ನೋಡಿಂದು।

ಆಗಿಂದಾಗೆ ಕೈ ತೊಳೆಯುತಿರಿ
ದೂರದಿಂದಲೇ ಕುಶಲವ ತಿಳಿಸಿರಿ
ಬಸ್ಸು ಕಾರಲಿ ಎಸಿಯು ಬೇಡ
ದೂರ ಕುಳಿತು ಪ್ರಯಾಣ ಮಾಡಿ
ಕೊರೋನಾಕೆ ನಾವು ಬಲಿಪಶು ಆಗದೆ
ಕೊರೋನವನ್ನೆ ಕೊಲ್ಲುವ ನಾವು।

## Message from Managing Director



ಆತ್ಮೀಯರೆ,

ಕೊರೋನಾ ಸಾಂಕ್ರಾಮಿಕ ರೋಗದ ಸಂಕಷ್ಟಕಾಲ ಮತ್ತು ಮಳೆಗಾಲ ತಂದೊಡ್ಡುವ ಅಡಚಣೆಗಳ ಅವಧಿಯಲ್ಲಿಯೂ ಬೆಂಗಳೂರು ವಿದ್ಯುತ್ ಸರಬರಾಜು ಕಂಪನಿಯ ಅಧಿಕಾರಿ/ಸಿಬ್ಬಂದಿ ವರ್ಗವು ಜನ ಸೇವೆಯಲ್ಲಿ ಬದ್ಧತೆಯಿಂದ ಕಾರ್ಯತತ್ಪರವಾಗಿರುವುದು ಶ್ಲಾಘನೆಯ ಸಂಗತಿ.

ಮಳೆಗಾಲ ತನ್ನ ತೀವ್ರತೆಯನ್ನು ಮುಂದುವರಿಸುವ ಜೊತೆಗೆ ಕೊರೋನಾ ಸಂಕಷ್ಟವೂ ಮುಂದುವರೆದಿರುವುದರಿಂದ ನಮ್ಮ ಹೊಣೆಗಾರಿಕೆ ಹೆಚ್ಚಿದೆ. ಈ ಸವಾಲುಗಳನ್ನು ಎದುರಿಸುತ್ತಿರುವ ಸಮಯದಲ್ಲಿಯೇ ನಮ್ಮ ಕಾರ್ಯಭಾರ ವಿಸ್ತಾರವಾಗುತ್ತಿದೆ. ಕೊರೋನಾ ನಿರ್ವಹಣೆಯ ಕಾರ್ಯದಲ್ಲಿ ನಮ್ಮ ಅಧಿಕಾರಿ/ಸಿಬ್ಬಂದಿಗೆ ಹೆಚ್ಚಿನ ಹೊಣೆಗಾರಿಕೆ ವಹಿಸಲಾಗಿದೆ. ಹಾಗೆಯೇ ಬೆಸ್ಕಾಂ ಸಹಾಯವಾಣಿ 1912 ಅನ್ನು ಕೊರೋನಾ ರೋಗಿಗಳ ಆಸ್ಪತ್ರೆ ಪ್ರವೇಶಕ್ಕೆ ಸಂಬಂಧಿಸಿದ ವಿಷಯಗಳ ವಿಚಾರಣೆಗೆ ಮಾಹಿತಿ ಪಡೆಯಲು ಸಾರ್ವಜನಿಕ ಬಳಕೆಗೆ ಜೋಡಿಸಲಾಗಿದೆ. ಈ ನಿಟ್ಟಿನಲ್ಲಿಯೂ ಬೆಸ್ಕಾಂ ಹೆಚ್ಚು ಹೊಣೆಗಾರಿಕೆಯಿಂದ ವರ್ತಿಸುತ್ತಿದ್ದು, ಸಾರ್ವಜನಿಕ ಮನ್ನಣೆಗೆ ಪಾತ್ರವಾಗಿದೆ.

ಮುಂದಿನ ಮೂರು ತಿಂಗಳು ನಿರಂತರ ವಿದ್ಯುತ್ ಸರಬರಾಜು ದೃಷ್ಟಿಯಿಂದ ಹೆಚ್ಚಿನ ಸವಾಲಿನ ಅವಧಿಯಾಗಲಿದೆ. ನಾಡ ಹಬ್ಬ ದಸರಾ, ಬೆಳಕಿನ ಹಬ್ಬ ದೀಪಾವಳಿ, ರಾಜ್ಯೋತ್ಸವ ಮತ್ತು ಕ್ರಿಸ್‌ಮಸ್ ಮುಂತಾದ ಪಾರಂಪರಿಕ ಮತ್ತು ಸಾಂಸ್ಕೃತಿಕ ಉತ್ಸವಗಳು ಸಾಲು ಸಾಲಾಗಿ ಬರಲಿದೆ. ಜೊತೆಗೆ ಹಿಂಗಾರು ಮಳೆಯ ಆಗಮನವೂ ಸೇರಿದೆ. ಆದುದರಿಂದ ನಮ್ಮ ಸಿಬ್ಬಂದಿಗೆ ಎದುರಾಗಬಹುದಾದ ಅಡತಡೆಗಳನ್ನು ಪೂರ್ವಭಾವಿಯಾಗಿಯೇ ಊಹಿಸಿ ಕರ್ತವ್ಯತತ್ಪರವಾಗುವುದಕ್ಕೆ ಬದ್ಧರಾಗೋಣ.

ಮೂಲಭೂತವಾಗಿ ಬೇರೆ ಬೇರೆ ವರ್ಗದ ಅಂದರೆ ಸಾಮಾನ್ಯ ಗೃಹಬಳಕೆ, ವಾಣಿಜ್ಯೋದ್ಯಮ, ಕೈಗಾರಿಕೆ, ಕೃಷಿ ಮತ್ತು ಇತರೆ ಕ್ಷೇತ್ರಗಳ ಬಳಕೆದಾರರಿಗೆ ವಿದ್ಯುತ್ ಪೂರೈಸುವ ಸೇವಾ ಸಂಸ್ಥೆಯಾಗಿರುವ ಬೆಸ್ಕಾಂ ತನ್ನ ಸುದೀರ್ಘ ಅನುಭವದಿಂದ ಬೇಡಿಕೆ ಮತ್ತು ಪೂರೈಕೆಯಲ್ಲಿ ಸಮತೋಲನವನ್ನು ಸಾಧಿಸುವ ನಿಟ್ಟಿನಲ್ಲಿ ಸಾಕಷ್ಟು ಯಶಸ್ಸು ಕಂಡಿದೆ. ಆದರೂ ಹೊಸ ಸವಾಲುಗಳು ಉದ್ಭವವಾಗುತ್ತಾ ಈ ಸಮತೋಲನಕ್ಕೆ ಭಂಗ ತರುತ್ತದೆ. ಅಂಥ ಸಮಯಗಳನ್ನು ನಿರೀಕ್ಷಿಸಿ ನಮ್ಮ ಯೋಜನೆ ಮತ್ತು ಅನುಷ್ಠಾನವನ್ನು ಸಮರ್ಪಕಗೊಳಿಸಿರುವ ಅಗತ್ಯ ಈಗ ಹೆಚ್ಚಾಗಿದೆ. ನಮ್ಮ ಅಧಿಕಾರಿ/ಸಿಬ್ಬಂದಿ ಈ ಹೊಸ ಸವಾಲುಗಳನ್ನು ಸಮರ್ಥವಾಗಿ ನಿಭಾಯಿಸುವ ಭರವಸೆಯಿದೆ.

ನಾಡಹಬ್ಬ ದಸರಾ, ದೀಪಾವಳಿ, ರಾಜ್ಯೋತ್ಸವ ಹಾಗೂ ಕ್ರಿಸ್‌ಮಸ್ ಹಬ್ಬದ ಶುಭಾಶಯಗಳನ್ನು ಕೋರುತ್ತಾ, ದುಷ್ಟ ಸಂಹಾರ ದೇವತೆ ಶಕ್ತಿ ಸ್ವರೂಪಿಣಿ ಚಾಮುಂಡೇಶ್ವರಿಯು ಸಂಕಷ್ಟಗಳಿಂದ ರಕ್ಷಿಸಲು; ಬೆಳಕಿನ ಹಬ್ಬ ದೀಪಾವಳಿಯು ನಮ್ಮ ಮುಂದಿನ ಹಾದಿಗೆ ಶುಭದ ಮುಂಬೆಳಕಿಗೆ ನಾಂದಿ ಹಾಡಲಿ, ಮನುಷ್ಯ ಕುಲಕ್ಕೆ ದಯೆ, ಕರುಣೆಯನ್ನು ಬೋಧಿಸಿದ ಕ್ರಿಸ್ತನ ಸಂದೇಶ ದಾರಿದೀಪವಾಗಲಿ ಎಂದು ಹಾರೈಸುತ್ತೇನೆ.

**ಎಂ.ಬಿ.ರಾಜೇಶ್‌ಗೌಡ**
ವ್ಯವಸ್ಥಾಪಕ ನಿರ್ದೇಶಕರು, ಬೆವಿಕಂ

## ಸಂಪಾದಕೀಯ



ಆತ್ಮೀಯರೆ,

ಅಕ್ಟೋಬರ್‌ನಿಂದ ಡಿಸೆಂಬರ್‌ವರೆಗಿನ ಅವಧಿ ಮುಂಗಾರು ಮಳೆಯ ನಂತರದ ಕಾಲ. ಈ ಬಾರಿ ಮುಂಗಾರು ಮಳೆ ಮಲೆನಾಡು, ಬಯಲುಸೀಮೆ ಮತ್ತು ಕರಾವಳಿ ಪ್ರದೇಶಗಳಲ್ಲಿ ಅಬ್ಬರಿಸಿದ ಪರಿಣಾಮ ರಾಜ್ಯದ ಎಲ್ಲ ಜಲಾಶಯಗಳೂ ಭರ್ತಿ ಆಗಿವೆ. ಕೆಲವೆಡೆ ಪ್ರವಾಹ ಮತ್ತು ಅತಿವೃಷ್ಟಿಯಿಂದಾಗಿ ಜನಜೀವನ ಅಸ್ತವ್ಯಸ್ತವಾಗಿ ಸಾಕಷ್ಟು ಹಾನಿಯಾಗಿರುವ ಪ್ರಸಂಗಗಳೂ ನಡೆದಿವೆ.

ಸರ್ಕಾರದ ಸಕಾಲಿಕ ಮುನ್ನೆಚ್ಚರಿಕೆ ಕ್ರಮಗಳಿಂದಾಗಿ ಜನರ ಸಂಕಷ್ಟಕ್ಕೆ ಸ್ಪಂದಿಸಲಾಗಿದೆ. ಜಲಾಶಯಗಳು ಭರ್ತಿಯಾಗಿರುವುದು ಹಲವು ಕಡೆ ಜಲವಿದ್ಯುತ್ ಉತ್ಪಾದನೆಗೆ ಸಹಕಾರಿಯಾಗಿರುವುದರಿಂದ ಒಂದು ರೀತಿಯಲ್ಲಿ ಆಶಾದಾಯಕ ಬೆಳವಣಿಗೆ ಎಂದೇ ಹೇಳಬಹುದು.

ಉತ್ತಮ ಮಳೆಯಿಂದಾಗಿ ಕೃಷಿ ಚಟುವಟಿಕೆಗಳು ಬಿರುಸುಗೊಂಡಿದ್ದು ಕೃಷಿ ಪಂಪ್ ಸೆಟ್‌ಗಳಿಗೆ ಬಳಸುತ್ತಿದ್ದ ವಿದ್ಯುತ್ ಸಾಕಷ್ಟು ಪ್ರಮಾಣದಲ್ಲಿ ಕಡಿಮೆಯಾಗಿ ಇತರೆ ಗ್ರಾಹಕರಿಗೆ ಆ ವಿದ್ಯುತ್ ಅನ್ನು ಬಳಸಲು ಅನುಕೂಲವಾಗುತ್ತದೆ.

ಒಟ್ಟಿನಲ್ಲಿ ಲಭ್ಯವಿರುವ ವಿದ್ಯುತ್ ಅನ್ನು ಸಮರ್ಪಕವಾಗಿ ಗ್ರಾಹಕರಿಗೆ ಪೂರೈಸುವ ಜವಾಬ್ದಾರಿ ನಮ್ಮ ಮೇಲಿರುತ್ತದೆ. ಆಗಸ್ಟ್ ಮತ್ತು ಸೆಪ್ಟೆಂಬರ್ ತಿಂಗಳಲ್ಲಿ ಬಿದ್ದ ಮಳೆಯಿಂದಾಗಿ 'ಬೆಸ್ಕಾಂ' ವ್ಯಾಪ್ತಿಯ ಜಿಲ್ಲೆಗಳಲ್ಲಿ ಕೆಲವು ಕಡೆ ಅನಾಹುತಗಳೂ ಸಂಭವಿಸಿವೆ. ಭಾರಿ ಮಳೆ ಮತ್ತು ಗಾಳಿಗೆ ಮರಗಳು ಹಾಗೂ ಕೊಂಬೆಗಳು ವಿದ್ಯುತ್ ತಂತಿಯ ಮೇಲೆ ಬಿದ್ದ ಪರಿಣಾಮ ಸರಬರಾಜು ಸ್ಥಗಿತಗೊಂಡ ಸ್ಥಳಗಳಲ್ಲಿ ದುರಸ್ತಿ ಕಾರ್ಯ ಕೈಗೊಂಡು ಸುಗಮ ವಿದ್ಯುತ್ ಪೂರೈಕೆ ಮಾಡುವುದು ಕೂಡ ನಮ್ಮ ಸಿಬ್ಬಂದಿ ಹಾಗೂ ಅಧಿಕಾರ ವರ್ಗಕ್ಕೆ ಸವಾಲಾಗಿತ್ತು.

ಈ ನಿಟ್ಟಿನಲ್ಲಿ ಹಗಲು ರಾತ್ರಿ ಎನ್ನದೆ ಕಾರ್ಯ ನಿರ್ವಹಿಸಿ ಸುಗಮ ವಿದ್ಯುತ್ ಪೂರೈಕೆಗೆ ಅನುವು ಮಾಡಿದ ಬೆಸ್ಕಾಂನ ಎಲ್ಲ ಸಿಬ್ಬಂದಿ ಹಾಗೂ ಅಧಿಕಾರ ವರ್ಗದವರನ್ನು ಅಭಿನಂದಿಸಲೇಬೇಕು. ಈ ರೀತಿಯ ಟೀಂವರ್ಕ್‌ನ್ನು ಮುಂದುವರಿಸುವ ಮೂಲಕ ಮುಂದೆಯೂ ಸಹ ತಮ್ಮೆಲ್ಲರ ಕರ್ತವ್ಯ ನಿಷ್ಠೆ ನಮ್ಮ ಸಂಸ್ಥೆಗೆ ಅಗತ್ಯ ಎಂದು ಹೇಳಲು ಬಯಸುತ್ತೇನೆ.

"ಬೆಸ್ಕಾಂ ಸ್ನೇಹಿ"ಗೆ ನಿಮ್ಮೆಲ್ಲರ ಸಹಕಾರವನ್ನು ಕೋರುತ್ತಾ, ಮುಂಬರುವ ದಸರಾ, ದೀಪಾವಳಿ ಹಾಗೂ ರಾಜ್ಯೋತ್ಸವಕ್ಕೆ ತಮ್ಮೆಲ್ಲರಿಗೂ ಹಾರ್ದಿಕ ಶುಭಾಶಯಗಳು.

ವಂದನೆಗಳೊಂದಿಗೆ.

**ಶ್ರೀ ಬಿ.ಆರ್.ಸೋಮಶೇಖರ್**
ಪ್ರಧಾನ ವ್ಯವಸ್ಥಾಪಕರು (ಗ್ರಾ.ಸಂ), ಬೆಸ್ಕಾಂ

# ನಮ್ಮ ಊರು, ನಮ್ಮ ಜಿಲ್ಲೆ – ಕೊಪ್ಪಳ


ಅವಿಭಜಿತ ರಾಯಚೂರು ಜಿಲ್ಲೆಯ ಭಾಗವಾಗಿದ್ದ ಕೊಪ್ಪಳ 1997ರಲ್ಲಿ ಪ್ರತ್ಯೇಕ ಜಿಲ್ಲೆಯಾಗಿ ಅಸ್ತಿತ್ವಕ್ಕೆ ಬಂತು.

ಬಯಲು ಸೀಮೆ ಪ್ರದೇಶವಾದ ಈ ಜಿಲ್ಲೆಯಲ್ಲಿ ತುಂಗಾ-ಭದ್ರಾ ನದಿಯ ಎಡದಂಡೆ ಕಾಲುವೆಯೇ ಜೀವವಾಹಿನಿ.

**ಆರಂಭದಲ್ಲಿ ಕೊಪ್ಪಳ, ಕುಷ್ಟಗಿ. ಯಲಬುರ್ಗಾ ಹಾಗೂ ಗಂಗಾವತಿ, ಈ ನಾಲ್ಕು ತಾಲ್ಲೂಕುಗಳಿಂದ ಕೂಡಿದ್ದ ಜಿಲ್ಲೆಗೆ ಈಗ ಹೊಸದಾಗಿ ಮೂರು ತಾಲ್ಲೂಕುಗಳನ್ನು ಸೇರಿಸಿ ಒಟ್ಟು ಏಳು ತಾಲ್ಲೂಕುಗಳಾಗಿವೆ. ಕುಕನೂರು, ಕನಕಗಿರಿ ಹಾಗೂ ಕಾರಟಗಿ ಹೊಸ ತಾಲ್ಲೂಕುಗಳಾಗಿವೆ. ಜಿಲ್ಲೆಯ ಒಟ್ಟು ಜನಸಂಖ್ಯೆ ಸುಮಾರು ಹತ್ತು ಲಕ್ಷ ಇದೆ.**

ನಾಲೆ ನೀರಿನ ಅನುಕೂಲವಿರುವುದರಿಂದ ಭತ್ತ ಮತ್ತು ಜೋಳ ಪ್ರಮುಖ ಬೆಳೆಗಳಾಗಿವೆ. ಉಳಿದಂತೆ ತೊಗರಿ, ಈರುಳ್ಳಿ, ಒಣಮೆಣಸು, ಕಡಲೇಕಾಯಿ, ಸೂರ್ಯಕಾಂತಿಯನ್ನೂ ಕೆಲವು ಕಡೆ ಬೆಳೆಯಲಾಗುತ್ತದೆ.

ಈ ಜಿಲ್ಲೆಯಲ್ಲಿ ಪುರಾಣ ಪ್ರಸಿದ್ಧವಾದ ಹಲವು ಪ್ರೇಕ್ಷಣೀಯ ಸ್ಥಳಗಳು ಹರಡಿಕೊಂಡಿವೆ.



**ಬಹಾದ್ದೂರ್ ಬಂಡೆ ಕೋಟೆ** : ಕೊಪ್ಪಳದಿಂದ 4 ಕಿ. ಮೀ ದೂರದ ಈ ಕೋಟೆ ಅನೇಕ ರಾಜರ ರಕ್ಷಣಾ ನೆಲೆಯಾಗಿತ್ತು. ಈ ಐತಿಹಾಸಿಕ ಕೋಟೆಯು ನಿರ್ಲಕ್ಷ್ಯಕ್ಕೆ ಒಳಗಾದರೂ ತನ್ನ ಆಕರ್ಷಣೆಯನ್ನು ಉಳಿಸಿಕೊಂಡಿದೆ.

ಹಿಂದೆ ವಿಜಯನಗರದ ಸಾಮ್ರಾಜ್ಯಕ್ಕೆ ಸೇರಿದ್ದ ಈ ಕೋಟೆಯನ್ನು **ಛತ್ರಪತಿ ಶಿವಾಜಿಯು** ತನ್ನ ವಶಕ್ಕೆ ತೆಗೆದುಕೊಂಡ. ಸುಮಾರು 165 ಮೀಟರ್ ಎತ್ತರದ ಕಡಿದಾದ ಕಲ್ಲಿನ ಬೆಟ್ಟದ ಮೇಲೆ ಈ ಕೋಟೆಯನ್ನು ಬೃಹದಾಕಾರದ ಬಂಡೆಗಳಿಂದ ಕಟ್ಟಲಾಗಿದೆ.

ಕೋಟೆಗೆ ಪೂರ್ವ ದಿಕ್ಕಿನಿಂದ ಮಾತ್ರ ಪ್ರವೇಶಿಸಬಹುದು. ಉಳಿದ ಮೂರು ಕಡೆಗಳಲ್ಲಿ ಪರ್ವತವು ಕಡಿದಾಗಿರುವುದರಿಂದ ಶತ್ರುಗಳ ಮುತ್ತಿಗೆ ಇಲ್ಲಿ ಅಸಾಧ್ಯ. ಕೋಟೆಯನ್ನು ಏರಲು ಮೆಟ್ಟಿಲುಗಳಿವೆ.

**ಆನೆಗೊಂದಿ** : ಗಂಗಾವತಿ ಸಮೀಪದಲ್ಲಿರುವ ಆನೆಗೊಂದಿ ವಿಜಯನಗರ ಸಾಮ್ರಾಜ್ಯದ ಮಾತೃ ಸ್ಥಾನವಾಗಿ ಚಾರಿತ್ರಿಕ ಮಹತ್ವವನ್ನು ಪಡೆದಿದೆ.

ಇಲ್ಲಿ ಪುರಾಣ ಪ್ರಸಿದ್ಧ ಮತ್ತು ಇತಿಹಾಸ ಕಾಲದ ಅಪೂರ್ವ ಸ್ಮಾರಕಗಳಿದ್ದು ವಿಶಿಷ್ಟ ಚಾರಿತ್ರಿಕ ನೆಲೆಯಾಗಿದೆ. ಇಲ್ಲಿ ದೊರೆತ ತಾಮ್ರ ಶಾಸನಗಳಲ್ಲಿ ಆನೆಗೊಂದಿಯ ಹಿಂದಿನ ಮಹತ್ವವನ್ನು ವಿವರವಾಗಿ ವರ್ಣಿಸಲಾಗಿದೆ. ಪೌರಾಣಿಕ ಮಹತ್ವದ ಸ್ಥಳವೂ ಆಗಿದ್ದು, ಪಂಪಾದೇವಿಯು ಇಲ್ಲಿರುವ ತುಂಗಾಭದ್ರಾ ನದಿಯ ಉತ್ತರ ದಂಡೆಯ ಮೇಲೆ ತಪಸ್ಸನ್ನು ಮಾಡಿ ಪರಮೇಶ್ವರನನ್ನು ಮೆಚ್ಚಿಸಿ ಅವನನ್ನು ಮದುವೆಯಾದಳು ಎಂದು ಪ್ರತೀತಿ. ಆನಂತರ ಇಬ್ಬರೂ ಹಂಪಿಯಲ್ಲಿ **ವಿರೂಪಾಕ್ಷ ಮತ್ತು ಪಂಪಾದೇವಿ** ಎಂಬ ಹೆಸರಿನಿಂದ ನೆಲೆಸಿದರು ಎಂದು ನಂಬಲಾಗಿದೆ. ತಪೋ ಭೂಮಿಯೇ ಪಂಪಾ ಸರೋವರ ಎಂದು ಕರೆಯುತ್ತಾರೆ. ಹಾಗೆಯೇ ಇದು ರಾಮಾಯಣ ಕಾಲದ ಕಿಷ್ಕಿಂದೆ ಪಟ್ಟಣ ಎಂಬ ಪ್ರತೀತಿಯೂ ಇದೆ. ಅಂಜನಾದ್ರಿ ಎಂಬ ಬೆಟ್ಟವು ಆಂಜನೇಯನು ಹುಟ್ಟಿದ ಸ್ಥಳವೆನಿಸಿದೆ.



**ಇಟಗಿ–ಮಹಾದೇವ ದೇವಾಲಯ** : ಕೊಪ್ಪಳದಿಂದ 25 ಕಿ.ಮೀ ದೂರದಲ್ಲಿರುವ ಈ ದೇವಾಲಯ ಕಲ್ಯಾಣ ಚಾಲುಕ್ಯರ ಆರನೆಯ ವಿಕ್ರಮಾದಿತ್ಯನ ದಂಡನಾಯಕನಾಗಿದ್ದ ಮಹಾದೇವ ತನ್ನ ಹುಟ್ಟೂರಾದ ಇಟಗಿಯ ವ್ಯಾಮೋಹಕ್ಕಾಗಿ 1112ರಲ್ಲಿ ನಿರ್ಮಿಸಿದ ಅಮೋಘವಾದ ಕೊಡುಗೆ ಎನ್ನಲಾಗಿದೆ.

ಶಿಲ್ಪ ಸೌಂದರ್ಯ, ಕುಸುರಿ ಕೆಲಸಗಳಿಂದಾಗಿ ಈ ದೇವಾಲಯವು ವಿಶ್ವದಲ್ಲಿಯೇ **'ದೇವಾಲಯಗಳ ಚಕ್ರವರ್ತಿ'** ಎಂಬ ಹೆಗ್ಗಳಿಕೆಯನ್ನು ಉಳಿಸಿಕೊಂಡಿದೆ. ವೈಶಿಷ್ಟ್ಯ ಪೂರ್ವವಾದ ಈ ದೇವಾಲಯದ ಗೋಪುರವು ಸುಮಾರು 24 ಮೀಟರು ಎತ್ತರದಲ್ಲಿ ನಿರ್ಮಾಣವಾಗಿದೆ.



**ಕನಕಗಿರಿ ಜೈನ ಕ್ಷೇತ್ರ** : ಗಂಗಾವತಿ ಸಮೀಪದಲ್ಲಿರುವ ಕನಕಗಿರಿ ಕ್ಷೇತ್ರ ಅಂದಿನ ಕಾಲದ ಪ್ರಸಿದ್ಧ ತಾಣ. ಪುರಾಣ ಕಾಲದಲ್ಲಿ ಋಷಿ ಮುನಿಗಳಿಂದ ಪಾವನಗೊಂಡು, ಪಾಳೇಗಾರರ ಆಳ್ವಿಕೆಯಲ್ಲಿ ಉಚ್ಛ್ರಾಯ ಸ್ಥಿತಿಯಲ್ಲಿ ಮೆರೆದ ಕಲಾ ಸಿರಿವಂತಿಕೆಯ ಕಣಜವಾಗಿರುವ ಸ್ಥಳ ಇದು.

ಕನಕಗಿರಿಯ ಆರಾಧ್ಯ ದೈವ ಕನಕಾಚಲ ಮೂರ್ತಿ. ಭವ್ಯವಾದ ಕೆತ್ತನೆಯ ಕಲಾ ಸಿರಿವಂತಿಕೆಯಿಂದ ತುಂಬಿರುವ ದೇವಾಲಯದ ಮಧ್ಯದಲ್ಲಿ ವಿರಾಜಿಸಿದ್ದಾನೆ.

ಮೂರ್ತಿ ದೊಡ್ಡ ಪ್ರಮಾಣದ ಸಾಲಿಗ್ರಾಮದಲ್ಲಿರುವುದರಿಂದ ಕನಕಗಿರಿಯನ್ನು **'ದಕ್ಷಿಣದ ಕಾಶಿ'** ಎಂದು ಕರೆಯುತ್ತಾರೆ.

**ಕಪಿಲ ತೀರ್ಥ ಜಲಪಾತ** : ಬರವನ್ನೇ ವರವಾಗಿ ಪಡೆದ ಈ ಜಿಲ್ಲೆಯ ಕುಷ್ಟಗಿಯಿಂದ ಸುಮಾರು 25 ಕಿ.ಮೀ ದೂರದಲ್ಲಿರುವ ಕಪಿಲಪ್ಪನ ಜಲಪಾತ(ಕಪಿಲ ತೀರ್ಥ) ಏಕೈಕ ಜಲಧಾರೆ ಎಂದು ಹೇಳಬಹುದು.

ಅರಣ್ಯದ ಮಧ್ಯದಲ್ಲಿದ್ದು ಹೆಚ್ಚು ಪ್ರಚಾರಕ್ಕೆ ಬಾರದ ಈ ಜಲಧಾರೆಯು ಮಳೆಗಾಲದಲ್ಲಿ ಮಾತ್ರ ಬೆಟ್ಟದ ಮೇಲಿಂದ ಧುಮ್ಮಿಕ್ಕುತ್ತದೆ. ಆದರೆ ಬೇಸಿಗೆಯಲ್ಲಿ ಬತ್ತಿ ಹೋಗುತ್ತದೆ.

ಈ ಜಲಪಾತ ತಲುಪಲು ಉತ್ತಮ ರಸ್ತೆ ಇಲ್ಲದಿರುವುದು ಪ್ರಮುಖ ಕೊರತೆಯಾಗಿದೆ.

**ಕಿನ್ನಾಳ ಗ್ರಾಮ** : ಕೊಪ್ಪಳದಿಂದ 12 ಕಿ.ಮೀ ದೂರದ ಕಿನ್ನಾಳ ಗ್ರಾಮವು ಕರಕುಶಲ ಕಲೆಯ ತಾಣವಾಗಿದೆ.

ಸಾಂಪ್ರದಾಯಿಕ ಕರಕುಶಲತೆಯಿಂದ ದೇಶ-ವಿದೇಶಗಳ ಆಸಕ್ತರ ಗಮನವನ್ನು ಸೆಳೆದಿದೆ. ಅನೇಕ ವಿದೇಶೀಯರು ಇಲ್ಲಿಗೆ ಭೇಟಿ ನೀಡುತ್ತಾರೆ. ಇಲ್ಲಿನ ಕಲೆಯ ಬಗ್ಗೆ ಅಧ್ಯಯನ ಮಾಡಿ ತರಬೇತಿಯನ್ನೂ ಪಡೆಯುತ್ತಾರೆ.

ವಿಜಯನಗರ ಅರಸರ ಕಾಲದಲ್ಲಿ ಆರಂಭವಾದ ಈ ಕರಕುಶಲ ಕಲೆಗೆ ಹೈದರಾಬಾದಿನ ನಿಜಾಮರ ಕಾಲದಲ್ಲಿಯೂ ಉತ್ತೇಜನ ಮತ್ತು ಪೋಷಣೆ ದೊರಕಿತು. ವಿಶ್ವ ಪರಂಪರೆಯ ಹಂಪಿಯ ವಿರೂಪಾಕ್ಷ ದೇವಾಲಯದಲ್ಲಿ ಚಿತ್ರಿಸಿರುವ ಚಿತ್ರಗಳು ಕಿನ್ನಾಳದ ಕಲಾವಿದರ ಪರಿಶ್ರಮ ಎಂಬುದು ಇತಿಹಾಸಕಾರರ ಅಭಿಪ್ರಾಯವಾಗಿದೆ.



**ಕುಕನೂರು ಗ್ರಾಮ** : ಯಲಬುರ್ಗಾ ಬಳಿಯಲ್ಲಿರುವ ಪ್ರಮುಖ ವಾಣಿಜ್ಯ ಮತ್ತು ಐತಿಹಾಸಿಕ ಸ್ಥಳವೇ ಕುಕನೂರು. ಈಗ ಇದನ್ನು ತಾಲ್ಲೂಕು ಕೇಂದ್ರವನ್ನಾಗಿ ಮಾಡಲಾಗಿದೆ.

ಶಾಸನಗಳಲ್ಲಿ ಇದನ್ನು **'ಕುಕ್ಕನೂರು'** ಎಂದು ಕರೆದು ಇದು ಅನೇಕ ಹಳ್ಳಿಗಳನ್ನು ಒಳಗೊಂಡು ಆಡಳಿತ ವಲಯ ಎಂಬ ಹೆಸರನ್ನೂ ಪಡೆದಿತ್ತು ಎಂದು ವರ್ಣಿಸಲಾಗಿದೆ. ಪ್ರಾಚೀನ ಕಾಲದಿಂದಲೂ ಇದು ಪ್ರಸಿದ್ಧ ವಿದ್ಯಾ ಕೇಂದ್ರವಾಗಿದ್ದ ಅಗ್ರಹಾರವಾಗಿತ್ತು.

ಹೊಯ್ಸಳರ ಕಾಲದ ಕಲ್ಲೇಶ್ವರ, ನವಲಿಂಗೇಶ್ವರ, ಚಳ್ಳೇಶ್ವರ, ಬಿಂದು ಮಾಧವ, ಮಲ್ಲಿಕಾರ್ಜುನ ಮೊದಲಾದ ಸುಂದರ ದೇವಾಲಯಗಳು ಇಲ್ಲಿವೆ.

**ಗವಿಸಿದ್ದೇಶ್ವರ ಮಠ**: ಆಧ್ಯಾತ್ಮಿಕ, ಶೈಕ್ಷಣಿಕ ಮತ್ತು ಸಾಮಾಜಿಕ ಕ್ಷೇತ್ರಗಳಲ್ಲಿ ಬೆಳಕು ಚೆಲ್ಲಿದ ವೀರಶೈವ ಮಠಗಳಲ್ಲಿ ಗವಿಸಿದ್ದೇಶ್ವರ ಮಠವು ಪ್ರಾಮುಖ್ಯತೆಯನ್ನು ಪಡೆದಿದೆ.

ಹೆಸರೇ ಹೇಳುವಂತೆ ಗವಿಯಲ್ಲಿ ನೆಲೆಸಿರುವ ಸಿದ್ದೇಶ್ವರನೇ **'ಗವಿಸಿದ್ದೇಶ್ವರ'** ಎಂದು ಹೇಳಲಾಗಿದೆ.

ಕೊಪ್ಪಳ ನಗರದ ಹೊರಭಾಗದಲ್ಲಿರುವ ಬೆಟ್ಟದ ಗವಿಗಳಲ್ಲಿ ಕಲ್ಲು ಬಂಡೆಗಳ ಮಧ್ಯದಲ್ಲಿ ಶತಮಾನಗಳ ಹಿಂದೆಯೇ ಮೈದಾಳಿರುವ ಈ ಮಠವು ನಿಸರ್ಗದ ರಮಣೀಯ ಸುಂದರ ತಾಣ.

ಪ್ರಕೃತಿಯ ಮೂಲಸ್ವರೂಪಕ್ಕೆ ಧಕ್ಕೆ ಬಾರದಂತೆ ನಿರ್ಮಾಣವಾಗಿರುವ ಈ ಮಠವನ್ನು ಅನೇಕ ಭಕ್ತರೂ ಹಾಗೂ ಪ್ರವಾಸಿಗರೂ ಸಂದರ್ಶಿಸುತ್ತಾರೆ.



ಇತಿಹಾಸದಲ್ಲಿ **'ಕೋಪಣನಗರ'** ಎಂದು ಕರೆಯಲ್ಪಡುವ ನಗರವೇ ಇಂದು **'ಕೊಪ್ಪಳ'** ಎಂದಾಗಿದೆ. ಇಲ್ಲಿ ದೊರೆತಿರುವ ಸಾಮ್ರಾಟ್ ಅಶೋಕನ ಶಾಸನಗಳಿಂದ ಇದೊಂದು ಬೌದ್ಧ ಧರ್ಮದ ಕೇಂದ್ರವಾಗಿಯೂ ಇದ್ದಿರಬಹುದು ಎಂದು ಹೇಳಲಾಗಿದೆ.

ಹಾಗೆಯೇ ಜೈನರ ನೆಲೆವೀಡೂ ಆಗಿದ್ದಿರಬಹುದು ಎನ್ನಲಾಗಿದೆ.

ಹಿಂದೆ ವಿವಿಧ ಧರ್ಮಗಳ ಸಂಗಮವಾಗಿದ್ದ ಈ ನೆಲದಲ್ಲಿ ಗವಿಮಠವು ವಿರಕ್ತ ಪರಂಪರೆಯನ್ನು ಅನೂಚಾನವಾಗಿ ಉಳಿಸಿಕೊಂಡಿದೆ.

**ಭೂಕೈಲಾಸಪುರ ಅಥವಾ ಪುರ** : ಕುಷ್ಟಗಿಯಿಂದ 15 ಕಿ.ಮೀ ದೂರದಲ್ಲಿರುವ ಧಾರ್ಮಿಕ ವಿದ್ಯಾಲಯದಂತಿರುವ ಈ ಪುರ ಅಥವಾ ಭೂಕೈಲಾಸಪುರದಲ್ಲಿ ಭಾರಿ ಸಂಖ್ಯೆಯ ದೇವರ ವಿಗ್ರಹಗಳಿವೆ. ಹಾಗೆಯೇ ನೂರಾರು ಗೋಪುರಗಳು. ದೇಗುಲಗಳೊಳಗೆಲ್ಲಾ ರಾಮಾಯಣ, ಮಹಾಭಾರತ, ಭಗವದ್ಗೀತೆಯ ಪ್ರಸಂಗಗಳೊಂದಿಗೆ ಅಷ್ಟಾದಶ ಪುರಾಣಗಳ, ಪುಣ್ಯಕತೆಗಳ ಭಾಗಗಳನ್ನು ಅಳವಡಿಸಿದ ಉಬ್ಬು ಶಿಲ್ಪಗಳನ್ನು ರೂಪಿಸಲಾಗಿದೆ.

ಈ ಊರಿನ ದಂತ ಕತೆಯ ಪ್ರಕಾರ ಮಹಾಭಾರತದ ಪಾಂಡವರ ತಾಯಿ ಕುಂತೀದೇವಿಯು ಗಜಗೌರಿ ವ್ರತವನ್ನು ಮಾಡುವಾಗ ಭೀಮಸೇನನು ಆಂಜನೇಯನ ಸಹಾಯದಿಂದ ಈ ಕೋಟಿ ಶಿವಲಿಂಗಗಳನ್ನೂ ಮತ್ತು ಸಾವಿರಾರು ದೇವತಾ ಮೂರ್ತಿಗಳನ್ನು ಸೃಷ್ಟಿಸಿದನೆಂದು ಪ್ರತೀತಿ.

**ಹೇಮಗುಡ್ಡದ ಗುಪ್ತ ಕೋಟೆ** : ಕನಕಗಿರಿಯನ್ನು 15 ರಿಂದ 18ನೆಯ ಶತಮಾನದವರೆಗೆ ರಾಜಧಾನಿಯನ್ನಾಗಿ ಮಾಡಿಕೊಂಡು ಆಡಳಿತ ನಡೆಸಿದ ಪಾಳೇಗಾರರು ಅಂದು ನಿರ್ಮಿಸಿದ ಕೋಟೆ ಕೊತ್ತಲಗಳಲ್ಲಿ ಹೇಮಗುಡ್ಡದ ಗುಪ್ತ ಕೋಟೆಯು ಬೆಟ್ಟ ಗುಡ್ಡಗಳ ನಡುವೆ ಅತ್ಯಂತ ಮಹತ್ವವನ್ನೂ ಮತ್ತು ಗೋಪ್ಯತೆಯನ್ನೂ ಹೊಂದಿದೆ.

ಪಾಳೇಗಾರರ ಗುಪ್ತ ತಾಣವೆಂದು ಹೇಳಲಾಗಿರುವ ಈ ಕೋಟೆಯು ಬಹಳ ವರ್ಷಗಳಿಂದ ಹೆಚ್ಚು ಪ್ರಚಾರವಿಲ್ಲದೆ ಅಜ್ಞಾತವಾಗಿಯೇ ಉಳಿದಿದೆ.

ಕೋಟೆಯ ಒಳಗೆ ಇರುವ ಶಿವ, ಪಾರ್ವತಿ, ಕನಕಾಚಲ, ಲಕ್ಷ್ಮೀನರಸಿಂಹ, ದುರ್ಗಾದೇವಿ ದೇವಾಲಯಗಳನ್ನು ವಿಭಿನ್ನ ರೀತಿಯಲ್ಲಿ ರಚಿಸಲಾಗಿದೆ.

# ಸಾಧಕರು ಇವರು

## ಜಿ.ನಾರಾಯಣ

ಕನ್ನಡದ ಬಹುಮುಖ ಪ್ರತಿಭೆಯ ವಿದ್ವಾಂಸರಲ್ಲಿ ಒಬ್ಬರಾದ ಜಿ.ನಾರಾಯಣ ಪ್ರಾಮಾಣಿಕತೆ ಮತ್ತು ಸರಳ ವ್ಯಕ್ತಿತ್ವಕ್ಕೆ ಹೆಸರಾದವರು.

ಸ್ವಾತಂತ್ರ್ಯ ಹೋರಾಟಗಾರರಾಗಿ, ಬರಹಗಾರರಾಗಿ, ಪತ್ರಿಕೋದ್ಯಮಿ ಹಾಗೂ ನಿಷ್ಠಾವಂತ ಆಡಳಿತಗಾರರಾಗಿಯೂ ಹೆಸರು ಮಾಡಿದವರು.

ಮಂಡ್ಯ ಜಿಲ್ಲೆ ಮದ್ದೂರು ತಾಲ್ಲೂಕಿನ ದೇಶಹಳ್ಳಿಯಲ್ಲಿ 1923ರ ಸೆಪ್ಟೆಂಬರ್ 2ರಂದು ಜನಿಸಿದ ಅವರು ಶಿಕ್ಷಣ ಪಡೆಯುವಾಗಲೇ ಸ್ವಾತಂತ್ರ್ಯ ಹೋರಾಟದಲ್ಲಿಯೂ ಭಾಗವಹಿಸಿದವರು.

ಮದ್ದೂರಿನ ವೀರಣ್ಣಗೌಡರ ಪ್ರಭಾವಕ್ಕೆ ಒಳಗಾದ ಅವರು ಶಿವಪುರದ ಸತ್ಯಾಗ್ರಹದಲ್ಲಿ ಸಕ್ರಿಯವಾಗಿ ಭಾಗಿಯಾದರು. ನಂತರ ಸಾಹುಕಾರ್ ಚನ್ನಯ್ಯ, ಕೆಂಗಲ್ ಹನುಮಂತಯ್ಯನವರ ಒಡನಾಟ ಅವರಿಗೆ ದೊರಕಿತು.



ಪುಣೆ ಬಳಿ ಉರುಳಿ ಎಂಬಲ್ಲಿಗೆ ಹೋಗಿ ಖಾದಿ ಗ್ರಾಮೋದ್ಯೋಗದ ತರಬೇತಿ ಪಡೆದರು. ಬೆಂಗಳೂರಿನ ಚಾಮರಾಜಪೇಟೆಯಲ್ಲಿ ತಮ್ಮದೇ ಮುದ್ರಣಾಲಯವನ್ನು ಆರಂಭಿಸಿದರು. ಅಂದಿನ ದಿನಗಳಲ್ಲಿ ಕಾಂಗ್ರೆಸ್ ಪತ್ರಿಕೆಯನ್ನು ಅವರೇ ಸಂಪಾದಿಸುತ್ತಿದ್ದರು. 'ವಿನೋದ' ಎಂಬ ಹಾಸ್ಯ ಮಾಸಪತ್ರಿಕೆಯನ್ನು ನಡೆಸುತ್ತಿದ್ದರು.

ಆ ಪತ್ರಿಕೆ ಅಂದಿನ ದಿನಗಳಲ್ಲಿ ಬಹು ಜನಪ್ರಿಯಗೊಂಡು ನಾಡಿಗೇರ ಕೃಷ್ಣರಾವ್, ಶ್ರೀನಿವಾಸ ವೈದ್ಯ, ಎಚ್.ಎಲ್.ಕೇಶವಮೂರ್ತಿ, ಅನಂತ ಕಲ್ಲೋಳರಂತಹ ಪ್ರತಿಭೆಗಳಿಗೆ ವೇದಿಕೆ ಒದಗಿಸಿತು.

ಜಿ.ನಾರಾಯಣ ಅವರು 1964ರಲ್ಲಿ ಬೆಂಗಳೂರಿನ ಮೇಯರ್ ಆಗಿ ಕಾರ್ಯನಿರ್ವಹಿಸಿದ ಕೀರ್ತಿಗೂ ಪಾತ್ರರಾಗಿದ್ದಾರೆ.

1969ರಲ್ಲಿ ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷರಾಗಿ, 1987ರಲ್ಲಿ ಕರ್ನಾಟಕ ಪ್ರೆಸ್ ಅಕಾಡೆಮಿ ಅಧ್ಯಕ್ಷರಾಗಿ, 1992ರಲ್ಲಿ ಕನ್ನಡ ಅಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷರಾಗಿ ಸೇವೆ ಸಲ್ಲಿಸಿರುವ ಅವರು ಎಲ್ಲಿಯೂ ಆಪಾದನೆ ವಿವಾದಗಳಿಗೆ ಸಿಲುಕದೆ ಉತ್ತಮ ಆಡಳಿತ ನೀಡಿ ಹೆಸರುಗಳಿಸಿದರು.

ಕರ್ನಾಟಕ ಏಕೀಕರಣ ಚಳವಳಿ ಮತ್ತು ಗೋಕಾಕ್ ಚಳವಳಿಗಳಲ್ಲೂ ಭಾಗವಹಿಸಿದ್ದಲ್ಲದೆ ಕನ್ನಡ ಪರವಾದ ಮಹತ್ವದ ಹೋರಾಟಗಳಲ್ಲಿ ಅವರು ನಿರ್ವಹಿಸಿದ ಪಾತ್ರ ಗಮನಾರ್ಹವಾದದ್ದು.

ಅದಕ್ಕಾಗಿ ರಾಜ್ಯ ಸರ್ಕಾರವು ಕರ್ನಾಟಕ ಏಕೀಕರಣ ಪ್ರಶಸ್ತಿ ನೀಡಿ ಗೌರವಿಸಿತ್ತು. ಹಂಪಿ ಕನ್ನಡ ವಿಶ್ವವಿದ್ಯಾಲಯ ನಾಡೋಜ ಪ್ರಶಸ್ತಿ ನೀಡಿತ್ತು. 'ಅಕ್ಷರದ ನೀಲಿ ಕಲಿಯಿರಿ', 'ಮಲೇರಿಯಾ ಹಾವಳಿ', 'ಕಬ್ಬಿನ ಕಾಥಾಂತರ', 'ರಾಷ್ಟ್ರೀಯ ಪದಗಳು' ಮತ್ತಿತರ ಕೃತಿಗಳನ್ನೂ ಅವರು ರಚಿಸಿದ್ದಾರೆ.

ಬಿ.ಎಂ.ಶ್ರೀ.ಪ್ರತಿಷ್ಠಾನ, ಸಾಹಿತ್ಯ ಸಂವರ್ಧಕ ಟ್ರಸ್ಟ್, ಜಾನಪದ ಲೋಕ ಮುಂತಾದ ಹಲವು ದತ್ತಿ ಸಂಸ್ಥೆಗಳ ನಿರ್ವಹಣೆ ಕೂಡ ಅವರ ಪಾಲಿಗೆ ದೊರೆತಿತ್ತು.

ಕರ್ನಾಟಕ ಗಮಕಕಲಾ ಪರಿಷತ್, ಶಶಿ ಕಲಾವಿದರು, ಲೇಖಕರ ಬಳಗ, ಶಾರದಾ ವಿದ್ಯಾ ಪೀಠ, ಉದಯ ಭಾನು ಕಲಾ ಸಂಘ ಮತ್ತಿತರ ಸಂಸ್ಥೆಗಳಿಗೆ ಅವರು ಮಾರ್ಗದರ್ಶಕರೂ ಆಗಿದ್ದರು. ತಮ್ಮ ಸಾರ್ವಜನಿಕ ಜೀವನದಲ್ಲಿ ಅತಿ ಹೆಚ್ಚು ಕ್ರಿಯಾಶೀಲರಾಗಿದ್ದ ಅವರು ಸಾಂಸ್ಕೃತಿಕ ವಲಯದಲ್ಲಿ ಹೆಚ್ಚು ತೊಡಗಿಸಿಕೊಂಡಿದ್ದರು.

ಹೀಗೆ ಹತ್ತು ಹಲವು ಪ್ರತಿಷ್ಠಿತ ಸ್ಥಾನಗಳಲ್ಲಿ ಯಶಸ್ವಿಯಾಗಿ ಕಾರ್ಯನಿರ್ವಹಿಸಿದ ಜಿ.ನಾರಾಯಣ ಅವರು 2011ರ ನವೆಂಬರ್ 19ರಂದು ನಿಧನರಾದರು.

## ಯಶಸ್ಸಿನ ನಿರ್ಣಯಗಳು ಹಾಗೂ ಸಂಕಲ್ಪಗಳು

**ಸಾಧಿಸಬಹುದಾದ ಗುರಿಗಳು :** ಯಾವುದೇ ಕೆಲಸಕ್ಕೆ ನಿಮ್ಮ ತೊಡಗಿಸಿಕೊಳ್ಳುವಿಕೆ ಶಿಶು ಹೆಜ್ಜೆಗಳಿಂದ ಪ್ರಾರಂಭವಾಗಲಿ, ಆಗ ಪ್ರತಿ ಹೆಜ್ಜೆಗಳು ಯಶಸ್ಸಿನ ಹೆಜ್ಜೆಗಳಾಗುತ್ತಾ ಬರುತ್ತವೆ ಮತ್ತು ಪ್ರಯತ್ನಗಳನ್ನು ಬಿಟ್ಟುಬಿಡುವ ಸಂದರ್ಭಗಳು ಕಡಿಮೆಯಾಗುತ್ತವೆ.

**ಸಹಾಯವನ್ನು ಪಡೆಯುವುದನ್ನು ಮರೆಯದಿರಿ:** ಜೀವನದಲ್ಲಿ ನಿಮಗೆ ಸಹಾಯಕರಾಗಬಲ್ಲ ಜನರ ಬಳಿ ನೀವು ಏನನ್ನು ಸಾಧಿಸಬೇಕೆಂದಿದ್ದೀರಾ ಎನ್ನುವ ಬಗ್ಗೆ ಚರ್ಚಿಸಿ, ಅವರುಗಳ ಬಳಿ ನಿಮ್ಮ ಯಶಸ್ಸಿನ ಸಾಧ್ಯತೆ ಬಗ್ಗೆ ಹೇಳಿಕೊಳ್ಳಿ. ಇಂತಹ ಕ್ರಮವು ನಿಮ್ಮ ಶಕ್ತಿಯನ್ನು ವೃದ್ಧಿಸುವುದು ಹಾಗೂ ನಿಮ್ಮ ಕಾರ್ಯವನ್ನು ಮಧ್ಯದಲ್ಲೆ ಬಿಟ್ಟು ಬಿಡುವಂತಹ ಸಂದರ್ಭ ಉಂಟಾಗಲಾರದು.

**ಅಭಿವೃದ್ಧಿಯ ಬಗ್ಗೆ ನಿಮ್ಮನ್ನೇ ನಿರ್ಣಯಿಸಿಕೊಳ್ಳಿ :** ಒಂದು ಸಣ್ಣ ಗುರಿ ಮುಟ್ಟಿದಾಗಲೂ ಆ ಬಗ್ಗೆ ನಿಮ್ಮಲ್ಲೇ ಹೆಮ್ಮೆಪಟ್ಟುಕೊಳ್ಳಿ. ತರುವಾಯ ಒಂದು ಸಣ್ಣ ಬಹುಮಾನವನ್ನು ನಿಮಗೇ ಕೊಟ್ಟುಕೊಳ್ಳಿ.



**ರಜನಿ.ಟಿ.ಕೆ**

ಸಹಾಯಕ ಪ್ರಧಾನ ವ್ಯವಸ್ಥಾಪಕರು
ಆಂತರಿಕ ಪರಿಶೋಧನೆ ಶಾಖೆ
ನಿಗಮ ಕಛೇರಿ, ಕೆ.ಆರ್. ವೃತ್ತ
ಬೆವಿಕಂ, ಬೆಂಗಳೂರು.

**ಇವರ ಮಗಳಾದ**

**ಪೂಜಿತಾ .ಆರ್**

**ಸಾಧನೆಗಳು :**

1) Telangana state board of intermediate education : 95.1%
2) KCET 2020 Rank : 299
3) IIT JEE Mains 2020 Rank : 4383
4) IIT JEE Advanced 2020 Rank : 2804
5) VIT Rank : 2101
6) BIT SAT score : 353/450

# ಸಾಧಕರು ಇವರು

## ವರ್ಣಶಿಲ್ಪಿ ಕೆ.ವೆಂಕಟಪ್ಪ

ವರ್ಣ ಚಿತ್ರಗಳಿಗೆ ಹೆಸರಾದ ಕರ್ನಾಟಕದ ಕಲಾವಿದರಲ್ಲಿ ಕೆ.ವೆಂಕಟಪ್ಪ ಅಗ್ರಗಣ್ಯರು.

ರಾಜ್ಯದ ಹಲವು ಕಡೆ ಹರಡಿಕೊಂಡಿರುವ ಅವರ ವರ್ಣ ಚಿತ್ರಗಳಿಗೆ ಮನಸೋಲದವರೇ ಇಲ್ಲ ಎನ್ನಬಹುದು.

ವರ್ಣಚಿತ್ರ ಕಲಾಕಾರರ ಕುಟುಂಬದಲ್ಲಿ 1887ರಲ್ಲಿ ಕೆ.ವೆಂಕಟಪ್ಪ ಅವರು ಜನಿಸಿದರು. ಹಿಂದಿನಿಂದ ಆಸ್ಥಾನ ಕಲಾಕಾರರಾಗಿದ್ದ ಅವರ ಕುಟುಂಬದ ಪರಂಪರೆಯನ್ನು ಮುಂದುವರೆಸುತ್ತಿದ್ದ ವೆಂಕಟಪ್ಪನವರು ತಮ್ಮ ತಂದೆಯವರಿಗೆ ಅರಮನೆಯಲ್ಲಿ ಸಹಾಯಮಾಡುತ್ತಿದ್ದ ತಮ್ಮ ಏಳನೇ ವಯಸ್ಸಿನಲ್ಲಿ ಮಹಾರಾಜರಾದ ನಾಲ್ವಡಿ ಕೃಷ್ಣರಾಜ ಒಡೆಯರ್ ಅವರ ಕಣ್ಣಿಗೆ ಬಿದ್ದರು.



ವೆಂಕಟಪ್ಪನವರ ಪ್ರತಿಭಾ ಶಕ್ತಿಯನ್ನು ಮನಗಂಡ ಮಹಾರಾಜರು ಸೂಕ್ತ ಪ್ರೋತ್ಸಾಹ ನೀಡಿ ಅವರನ್ನು ಕಲ್ಕತ್ತೆಯ ಸರ್ಕಾರಿ ಲಲಿತಕಲಾ ಕಾಲೇಜಿನಲ್ಲಿ ವ್ಯಾಸಂಗ ಮಾಡಲು ಅವಕಾಶ ಮಾಡಿಕೊಟ್ಟರು.

ವೆಂಕಟಪ್ಪ ಹಾಗೂ ನಂದಲಾಲ್ ಬೋಸ್ ಅವರು ಅಲ್ಲಿನ ಗುರುಗಳಾಗಿದ್ದ ಅಬನೀಂದ್ರನಾಥ ಟ್ಯಾಗೋರ್ ಅವರ ಗರಡಿಯಲ್ಲಿ ಉತ್ತಮ ತರಬೇತಿ ಹೊಂದಿ ಅವರ ನೆಚ್ಚಿನ ಶಿಷ್ಯರಾದರು. ತಮ್ಮ 20ನೇ ವಯಸ್ಸಿಗೆ ಲಲಿತಕಲಾ ವ್ಯಾಸಂಗ ಮುಗಿಸಿದ ಬಳಿಕ ವೆಂಕಟಪ್ಪನವರು ಮೈಸೂರಿಗೆ ಮರಳಿ, ಆಸ್ಥಾನ ಶಿಲ್ಪಿಗಳಾಗಿ ಮಹಾರಾಜರ ಪೋಷಕತ್ವ ಪಡೆದರು.

1946ರಲ್ಲಿ ನಾಲ್ವಡಿ ಕೃಷ್ಣರಾಜರ ಕಾಲಾನಂತರ ವೆಂಕಟಪ್ಪನವರು ತಮ್ಮ ಕಾರ್ಯಚಟುವಟಿಕೆಯನ್ನು ಬೆಂಗಳೂರಿಗೆ ವರ್ಗಾಯಿಸಿ, ಮಲ್ಲೇಶ್ವರಂ ಬಡಾವಣೆಯ ಒಬ್ಬ ಪ್ರಮುಖ ನಾಗರಿಕರಾದರು.

ಕಲಾ ಪೋಷಕಿ ಎಂದೇ ಹೆಸರು ಗಳಿಸಿದ್ದ ಅಂದಿನ ಕೂಚ್–ಬಿಹಾರ ರಾಜ್ಯದ ಮಹಾರಾಣಿಯವರು ಆಗಾಗ ಬೆಂಗಳೂರಿಗೆ ಆಗಮಿಸುತ್ತಿದ್ದರು. ಅವರ ಒಂದು ಭೇಟಿಯ ಸಮಯದಲ್ಲಿ ಕಲಾಕೃತಿಗಳ ಪ್ರದರ್ಶನ ಒಂದರಲ್ಲಿ ವೆಂಕಟಪ್ಪನವರ ವರ್ಣ ಕಲಾಕೃತಿಗಳನ್ನು ವೀಕ್ಷಿಸಿ ಅತ್ಯಂತ ಪ್ರಭಾವಿತರಾದರು. ಕೆಲವು ಸಮಯದ ಹಿಂದೆ ಅಗಲಿದ ತಮ್ಮ ಪತಿಯ ಭಾವಚಿತ್ರದ ಕಲಾಕೃತಿಯನ್ನು ರಚಿಸಿ ಕೊಡಬೇಕೆಂದು ವೆಂಕಟಪ್ಪನವರಲ್ಲಿ ವಿನಂತಿಸಿದರು. ವೆಂಕಟಪ್ಪನವರು ಆ ಮಹಾರಾಜರ ಎರಡು ಕಲಾಕೃತಿಗಳನ್ನು – ಒಂದು ಭಾರತೀಯ ಉಡುಪಿನಲ್ಲಿ ಹಾಗೂ ಮತ್ತೊಂದು ಪಾಶ್ಚಾತ್ಯ ಉಡುಪಿನಲ್ಲಿ – ರಚಿಸಿದ ಕಲಾಕೃತಿಯನ್ನು ವೀಕ್ಷಿಸಿ ಮಹಾರಾಣಿಯವರು ಅತ್ಯಂತ ಸಂತುಷ್ಟರಾದರು.

ರಾಜ್ಯ ಸರ್ಕಾರವು ವೆಂಕಟಪ್ಪನವರ ಅತ್ಯದ್ಭುತ ಕಲಾಸೇವೆಯನ್ನು ಗುರುತಿಸಿ ಅವರ ಸ್ಮರಣಾರ್ಥ ಬೆಂಗಳೂರಿನಲ್ಲಿರುವ ಲಲಿತಕಲಾ ಸಂಗ್ರಹಾಲಯಕ್ಕೆ 'ವೆಂಕಟಪ್ಪ ಆರ್ಟ್ ಗ್ಯಾಲರಿ'ಎಂದು ನಾಮಕರಣ ಮಾಡಿದೆ. ಇದು ಕೇವಲ ಸಂಗ್ರಹಾಲಯ ಮಾತ್ರವಲ್ಲದೆ ಕಲಾ ಪ್ರದರ್ಶನ ಕೇಂದ್ರವಾಗಿಯೂ ಖ್ಯಾತಿ ಪಡೆದಿದೆ.

ಇಲ್ಲಿ ವೆಂಕಟಪ್ಪನವರು ರಚಿಸಿದ ಊಟಿ ಸರೋವರದ ರಮಣೀಯ ದೃಶ್ಯ, ಚರ್ಚ್ ಹಿಲ್ ಪ್ರದೇಶದಿಂದ ಊಟಿಯ ನೋಟ, ನೀಲಗಿರಿ ಪರ್ವತ ಶ್ರೇಣಿ, ಊಟಿಯಲ್ಲಿ ಸೂರ್ಯೋದಯ, ಕೊಡೈಕೆನಾಲ್, ಮುಂಗಾರಿನ ವರ್ಣ ಚಿತ್ರ ಹಾಗೂ ಇತರ ಅನೇಕ ವರ್ಣಚಿತ್ರಗಳು ವೀಕ್ಷಕರನ್ನು ಆಕರ್ಷಿಸುತ್ತವೆ.

ಸರಳತೆ, ಸತ್ಯಸಂಧತೆ ಹಾಗೂ ಅನ್ಯಾಯಗಳ ವಿರುದ್ಧ ಧ್ವನಿ ಎತ್ತುವುದಕ್ಕೆ ಹೆಸರಾಗಿದ್ದ ವೆಂಕಟಪ್ಪನವರು ಅತ್ಯುತ್ತಮ ವೀಣಾವಾದಕರಾಗಿದ್ದರು. ಅವರು ವಿಶ್ವವಿಖ್ಯಾತ ವೈಣಿಕ ವೀಣೆ ಶೇಷಣ್ಣನವರ ಶಿಷ್ಯರಾಗಿದ್ದರು. ಇದು ಅವರಲ್ಲಿ ಆಳವಾಗಿ ಬೇರು ಬಿಟ್ಟಿದ್ದ ಲಲಿತಕಲೆಗಳ ಮೇಲಿನ ಅಭಿಮಾನಕ್ಕೆ ದ್ಯೋತಕವಾಗಿದೆ.

ವೆಂಕಟಪ್ಪನವರು 1965ರಲ್ಲಿ ಮಲ್ಲೇಶ್ವರದ ತಮ್ಮ ಸ್ವಗೃಹದಲ್ಲಿ ದೈವಾಧೀನರಾದರು. ಅವರು ರಚಿಸಿರುವ ವರ್ಣಚಿತ್ರಗಳು ಅಜರಾಮರ.

### ಹುಟ್ಟುಹಬ್ಬದ ಶುಭಾಶಯಗಳು

2020ನೇ ವರ್ಷದ ಅಕ್ಟೋಬರ್–ಡಿಸೆಂಬರ್ ತಿಂಗಳಿನಲ್ಲಿ ಹುಟ್ಟುಹಬ್ಬ ಆಚರಿಸುತ್ತಿರುವ ಬೆಸ್ಕಾಂನ ಅಧಿಕಾರಿಗಳು, ಸಿಬ್ಬಂದಿಗೆ "ಬೆಸ್ಕಾಂ ಸ್ನೇಹಿ" ಯ ಹುಟ್ಟುಹಬ್ಬದ ಹಾರ್ದಿಕ ಶುಭಾಶಯಗಳು.

– ಸಂಪಾದಕೀಯ ಮಂಡಳಿ



### ಹಾರ್ದಿಕ ಬೀಳ್ಕೊಡುಗೆ

ಹತ್ತು ಹಲವು ವರ್ಷ ಸೇವೆ ಸಲ್ಲಿಸಿ ಬೆಸ್ಕಾಂನ ಏಳಿಗೆಗೆ ಶ್ರಮಿಸಿ 2020ನೇ ವರ್ಷದ ಅಕ್ಟೋಬರ್–ಡಿಸೆಂಬರ್ ತಿಂಗಳಲ್ಲಿ ನಿವೃತ್ತಿ ಹೊಂದುತ್ತಿರುವ ಅಧಿಕಾರಿಗಳು / ಸಿಬ್ಬಂದಿಗೆ "ಬೆಸ್ಕಾಂ ಸ್ನೇಹಿ"ಯ ಹಾರ್ದಿಕ ಬೀಳ್ಕೊಡುಗೆ

– ಸಂಪಾದಕೀಯ ಮಂಡಳಿ

# ಇವರು ನಮ್ಮ ಸಾಹಿತಿಗಳು

## ಜಯದೇವಿತಾಯಿ ಲಿಗಾಡೆ



ಮರಾಠಿ ನೆಲದಲ್ಲಿ ಹುಟ್ಟಿ ಕನ್ನಡ ಸಾಹಿತ್ಯವನ್ನು ಶ್ರೀಮಂತಗೊಳಿಸಿದ ಅಪರೂಪದ ಮಹಿಳಾ ಸಾಹಿತಿ ಜಯದೇವಿತಾಯಿ ಲಿಗಾಡೆ ಅವರು.

ಸೊಲ್ಲಾಪುರದ ಶ್ರೀಮಂತ ಮನೆತನದಿಂದ ಬಂದಿದ್ದರೂ ಅತ್ಯಂತ ಸರಳ-ಸಜ್ಜನಿಕೆಯ ವ್ಯಕ್ತಿಯಾಗಿ ಶಿವಶರಣರಂತೆ ಕಾಯಕ ಯೋಗಿಯಾಗಿ ಬದುಕಿದವರು.

ಹೀಗೆ ಅಜ್ಜನ ಶ್ರೀಮಂತಿಕೆಯಲ್ಲಿಯೂ ತೋರಿದ ಔದಾರ್ಯ, ತಂದೆಯ ಜನಪರ ಕಾಳಜಿ, ತಾಯಿಯ ಕರುಣೆ ಮೈಗೂಡಿಸಿಕೊಂಡು ಬೆಳೆದ ಜಯದೇವಿತಾಯಿ ಲಿಗಾಡೆ ಅವರು ಹುಟ್ಟಿದ್ದು 1912ರ ಜೂನ್ 23ರಂದು. ತಂದೆ ಚನ್ನಬಸಪ್ಪ ಮಡಕಿ, ತಾಯಿ ಸಂಗವ್ವ.

ಮನೆ ಭಾಷೆ ಕನ್ನಡವಾಗಿದ್ದರೂ, ಆಡಳಿತ ಭಾಷೆ ಮರಾಠಿಯಾಗಿರುವುದರಿಂದಲೂ ಮತ್ತು ಸೊಲ್ಲಾಪುರದಲ್ಲಿ ಕನ್ನಡ ಮಾಧ್ಯಮ ಶಾಲೆಗಳಿಲ್ಲದ ಕಾರಣ ಜಯದೇವಿತಾಯಿಯವರು ಅನಿವಾರ್ಯವಾಗಿ ತಮ್ಮ ಆರನೆಯ ವಯಸ್ಸಿಗೆ ಮರಾಠಿ ಶಾಲೆ ಸೇರಬೇಕಾಯಿತು. ಮನೆ ದೇವರು ಸಿದ್ಧರಾಮ ಒಳಗೊಂಡಂತೆ ಬಸವಾದಿ ಶರಣರು ವಚನ ಬರೆದದ್ದು ಕನ್ನಡದಲ್ಲಿ ಆದ್ದರಿಂದ ಜಯದೇವಿಯವರು ಆಸಕ್ತಿಯಿಂದ ಕನ್ನಡ ಕಲಿತದ್ದು ಮೂರು ಮಕ್ಕಳ ತಾಯಿ ಆದ ಮೇಲೆ.

ತಾತ್ವಿಕವಾಗಿ ಬಸವಣ್ಣ, ಆಧ್ಯಾತ್ಮಿಕವಾಗಿ ಸಿದ್ಧರಾಮ, ರಾಷ್ಟ್ರೀಯತೆಗಾಗಿ ಮಹಾತ್ಮಾ ಗಾಂಧೀಜಿಯವರಿಂದ ಪ್ರಭಾವಿತರಾಗಿ ವ್ಯಕ್ತಿತ್ವ ರೂಪಿಸಿಕೊಂಡ ಜಯದೇವಿತಾಯಿ ಲಿಗಾಡೆಯವರು ದೀನ ದಲಿತರ, ಬಡವರ ಪರವಾಗಿ ಧ್ವನಿ ಎತ್ತಿದವರು. ಜೊತೆಗೆ ಅವರು ಕಂಕಣಬದ್ಧರಾಗಿ ನಿಂತಿದ್ದು ಕನ್ನಡ ಸೇವೆಗಾಗಿ.

'ತಾಯಿಯ ಪದಗಳು', 'ಜಯಗೀತೆ', 'ಸಾವಿರ ಪದಗಳು', 'ತಾರಕ್ಕ ತಂಬೂರಿ', 'ಬಂದೇವ ಕಲ್ಯಾಣಕ್ಕೆ', 'ಅರಿವಿನಾಗರ', 'ಶ್ರೀ ಸಿದ್ಧರಾಮೇಶ್ವರ ಪುರಾಣ' ಮೊದಲಾದವು ಅವರ ಕನ್ನಡ ಕೃತಿಗಳು. ಅವರಿಗೆ ಕನ್ನಡದ ಜತೆಗೆ ಮರಾಠಿ ಭಾಷೆ ಮೇಲೆ ಸಹ ಪ್ರಭುತ್ವವಿದ್ದುದರಿಂದಾಗಿ 'ಸಮೃದ್ಧ ಕರ್ನಾಟಕಾಂಚಿ ರೂಪರೇಷ', 'ಸಿದ್ಧವಾಣಿ', 'ಬಸವದರ್ಶನ', 'ಮಹಾಯೋಗಿನಿ ಅಕ್ಕಮಹಾದೇವಿ', 'ಬಸವ ವಚನಾಮೃತ', 'ಶೂನ್ಯ ಸಂಪಾದನೆ' ಮುಂತಾದವು ಅವರ ಮರಾಠಿ ಕೃತಿಗಳು.

ಸಾಹಿತ್ಯ ಸೇವೆಯ ಜತೆಗೆ ಮಹಿಳಾ ಸಂಘಟನೆಗಳು, ಸೇವಾದಳ, ಲಿಂಗಾಯಿತ ಪರಿಷತ್ತು, ಕರ್ನಾಟಕ ವಿದ್ಯಾವರ್ಧಕ ಸಂಘ, ಸಾಕ್ಷರತಾ ಮಂಡಳಿ ಇತ್ಯಾದಿ ಸಂಘಟನೆಗಳಲ್ಲಿ ಅವರು ಕ್ರಿಯಾಶೀಲರಾಗಿದ್ದರು.

ಕರ್ನಾಟಕ ಸಾಹಿತ್ಯ ಮತ್ತು ಲಲಿತಕಲಾ ಅಕಾಡೆಮಿಗಳ ಪ್ರಶಸ್ತಿ, ಕರ್ನಾಟಕ ವಿಶ್ವ ವಿದ್ಯಾಲಯದ ಗೌರವ ಡಾಕ್ಟರೇಟ್, 1974ರಲ್ಲಿ ಮಂಡ್ಯದಲ್ಲಿ ನಡೆದ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನದ ಅಧ್ಯಕ್ಷತೆ, ಜಾನಪದ ಸಮ್ಮೇಳನ ಅಧ್ಯಕ್ಷತೆ ಇವೇ ಮೊದಲಾದ ಪ್ರಶಸ್ತಿ ಗೌರವಗಳು ಅವರಿಗೆ ಸಂದಿವೆ.

'ನನ್ನ ಜೀವಮಾನದ ಕೊನೆಯುಸಿರಿರುವವರೆಗೂ ಕನ್ನಡಕ್ಕಾಗಿಯೇ ದುಡಿಯುವೆ, ಕನ್ನಡಕ್ಕಾಗಿಯೇ ಬದುಕುವೆ, ಕನ್ನಡವೇ ನನ್ನ ಧರ್ಮ' ಎಂದು ಸಾರಿದ್ದ ಧೀಮಂತ ಮಹಿಳೆ ಜಯದೇವಿತಾಯಿ ಲಿಗಾಡೆ ಅವರು 1986ರ ಜುಲೈ 25ರಂದು ನಿಧನರಾದರು.

ಸ್ವಾತಂತ್ರ್ಯ ಚಳವಳಿ ಹಾಗೂ ಕರ್ನಾಟಕ ಏಕೀಕರಣದಲ್ಲಿಯೂ ಅವರ ಪಾತ್ರ ಗಮನಾರ್ಹವಾದುದು.

## ಶ್ರೀಮತಿ ತ್ರಿವೇಣಿ



ಕನ್ನಡ ಸಾಹಿತ್ಯದ ದಿಗಂತದಲ್ಲಿ ಅಚ್ಚಳಿಯದ ಧ್ರುವತಾರೆಯಾಗಿ ಮಿಂಚಿ ಮರೆಯಾದ ಕೆಲವೇ ಬರಹಗಾರ್ತಿಯರಲ್ಲಿ ಶ್ರೀಮತಿ ತ್ರಿವೇಣಿ ಪ್ರಮುಖರು.

ಅವರು ತಮ್ಮ ಕಥೆ ಕಾದಂಬರಿಗಳ ಮೂಲಕ ಪ್ರಗತಿಪರ ಧೋರಣೆಯನ್ನು ಪ್ರತಿಪಾದಿಸಿದವರು.

ಒಂದು ದಶಕದ ಅವಧಿಯಲ್ಲಿ ರಚಿತವಾದ ಅವರ ಕೃತಿಗಳು ಕನ್ನಡದಲ್ಲಿ ಓದುಗರ ಒಂದು ವರ್ಗವನ್ನೇ ಸೃಷ್ಟಿಸಿ ಜನಪ್ರಿಯತೆ ಗಳಿಸಿದವು.

ಖ್ಯಾತ ಸಾಹಿತಿ ಬಿ.ಎಂ.ಶ್ರೀ ಅವರ ಸಹೋದರ ಬಿ.ಎಂ.ಕೃಷ್ಣಸ್ವಾಮಿಯವರ ಎರಡನೆಯ ಮಗಳಾದ ತ್ರಿವೇಣಿ ಅವರು 1928ರ ಸೆಪ್ಟೆಂಬರ್ 1 ರಂದು ಜನಿಸಿದರು.

ಅವರ ಹುಟ್ಟು ಹೆಸರು ಭಾಗೀರಥಿ ನಂತರ ಶಾಲೆಗೆ ಸೇರಿಸುವಾಗ ಅನಸೂಯ ಎಂದಾಯಿತು.

ಕಾಲೇಜು ಶಿಕ್ಷಣವನ್ನು ಮೈಸೂರಿನಲ್ಲಿ ಪಡೆದ ಅವರು 1947ರಲ್ಲಿ ಮಹಾರಾಜ ಕಾಲೇಜಿನಿಂದ ಮನಃಶಾಸ್ತ್ರದಲ್ಲಿ ಚಿನ್ನದ ಪದಕದೊಂದಿಗೆ ಬಿ.ಎ.ಪದವಿ ಪಡೆದರು.

ಅಂದಿನ ದಿನಗಳಲ್ಲಿ ಮೈಸೂರಿನ ಶಾರದಾವಿಲಾಸ ಕಾಲೇಜಿನಲ್ಲಿ ಇಂಗ್ಲಿಷ್ ಪ್ರಾಧ್ಯಾಪಕರಾಗಿದ್ದ ಶಂಕರ್ ಅವರ ಪತಿ.

ಮದುವೆಯ ನಂತರ ಅನಸೂಯ ಶಂಕರ್ ಆದರು. ಆದರೆ 'ತ್ರಿವೇಣಿ' ಎಂಬ ಕಾವ್ಯನಾಮದಿಂದ ಕನ್ನಡ ಸಾಹಿತ್ಯ ಲೋಕದಲ್ಲಿ ಪ್ರಖ್ಯಾತರಾದರು.

ಶರಪಂಜರ, ಬೆಳ್ಳಿಮೋಡ, ಬೆಕ್ಕಿನಕಣ್ಣು, ಭಾನುಬೆಳಗಿತು, ಹಣ್ಣೆಲೆ ಚಿಗುರಿದಾಗ, ಹೂವುಹಣ್ಣು, ತಾವರೆಕೊಳ, ವಸಂತಗಾನ ಇವೇ ಮುಂತಾದವು ಅವರ ಕಾದಂಬರಿಗಳು.

ಎರಡುಮನಸ್ಸು, ಸಮಸ್ಯೆಯ ಮಗು, ಹೆಂಡತಿಯ ಹೆಸರು ಅವರ ಕಥಾಸಂಕಲನಗಳಾಗಿವೆ.

ಮನೋವೈಜ್ಞಾನಿಕ ಸಮಸ್ಯೆಗಳನ್ನು ತಮ್ಮ ಕಾದಂಬರಿಯ ವಸ್ತುವನ್ನಾಗಿ ಆಯ್ದುಕೊಂಡ ತ್ರಿವೇಣಿಯವರು ಕನ್ನಡದ ಕಥೆ-ಕಾದಂಬರಿಗಳಿಗೆ ಹೊಸ ತಿರುವನ್ನು ಕೊಟ್ಟರು.

ಅವರ ಸಣ್ಣ-ಕಥೆಗಳ ಸಂಕಲನ 'ಸಮಸ್ಯೆಯ ಮಗು'ವಿಗೆ 1962ರಲ್ಲಿ ದೇವರಾಜ ಬಹದ್ದೂರ್ ಪ್ರಶಸ್ತಿ ಮತ್ತು 1960ರಲ್ಲಿ 'ಅವಳ ಮನೆ' ಕಾದಂಬರಿಗೆ ರಾಜ್ಯ ಪ್ರಶಸ್ತಿ ದೊರಕಿದವು.

ಹಣ್ಣೆಲೆ ಚಿಗುರಿದಾಗ, ಬೆಳ್ಳಿ ಮೋಡ, ಶರಪಂಜರ, ಹೂವುಹಣ್ಣು ಕಾದಂಬರಿಗಳು ಚಲನಚಿತ್ರಗಳಾಗಿ ಜನಪ್ರಿಯತೆಗಳಿಸಿದವು. ಅವರ ಕೆಲವು ಕೃತಿಗಳು ಹಿಂದಿ, ತೆಲುಗು ಹಾಗೂ ಇಂಗ್ಲಿಷ್ ಭಾಷೆಗೆ ಅನುವಾದಗೊಂಡಿವೆ.

ಕನ್ನಡ ಕಾದಂಬರಿ ಸಾಹಿತ್ಯದಲ್ಲಿ ಬಹು ಬೇಗ ವಿಶಿಷ್ಟ ಸ್ಥಾನಗಳಿಸಿಕೊಂಡು ಜನಪ್ರಿಯ ಸಾಹಿತಿಯಾಗಿದ್ದ ತ್ರಿವೇಣಿಯವರು 1963ರ ಜುಲೈ 29ರಂದು ತಮ್ಮ 35ನೇ ವಯಸ್ಸಿನಲ್ಲಿ ನಿಧನರಾದರು.

ಕಿರಿಯ ವಯಸ್ಸಿನಲ್ಲಿ ಹಿರಿಯ ಸಾಧನೆ ಮೂಡಿದ ಅಪರೂಪದ ಪ್ರತಿಭಾವಂತ ಲೇಖಕಿ ತ್ರಿವೇಣಿ.

# ಆರೋಗ್ಯವೇ ಭಾಗ್ಯ

## ಅಮೃತಬಳ್ಳಿ



ಅಮೃತಬಳ್ಳಿಯು ಸ್ವಲ್ಪ ಕಹಿ ಮತ್ತು ಒಗರು ರುಚಿಯುಳ್ಳದ್ದಾಗಿದೆ.

ಇದು ಅಗ್ನಿವರ್ಧಕ. ಪಿತ್ತಶಾಮಕ, ಜ್ವರಹರವೂ ಆಗಿದೆ. ಕೆಮ್ಮು, ಜ್ವರ, ಸಂಧಿವಾತ, ಶರೀರದ ಇತರೆ ನೋವುಗಳಲ್ಲಿ ಇದನ್ನು ಪರಿಣಾಮಕಾರಿ ಔಷಧಿಯಾಗಿ ಬಳಸಲಾಗುತ್ತದೆ.

ಇದರ ಕಾಂಡದ ರಸ 2 ಚಮಚದೊಂದಿಗೆ 2 ಚಮಚ ಜೇನುತುಪ್ಪವನ್ನು ಬೆರೆಸಿ ಸಂಜೆ ಮತ್ತು ಮುಂಜಾನೆ ೯೦ ದಿನಗಳವರೆಗೆ ಸೇವಿಸಿದರೆ ದೇಹದಲ್ಲಿ ರೋಗ ನಿರೋಧಕ ಶಕ್ತಿ ಹೆಚ್ಚಾಗುತ್ತದೆ.

ಕಾಮಾಲೆ, ಮೂಲವ್ಯಾಧಿ, ಸಾಧಾರಣ ಜ್ವರ, ಕೆಮ್ಮು, ಶೀತ, ನೆಗಡಿ ಹಾಗೂ ಚರ್ಮರೋಗಗಳ ನಿವಾರಣೆಗೆ ಇದನ್ನು ಬಳಸುತ್ತಾರೆ.

**ಮಧುಮೇಹ ನಿವಾರಣೆಗೆ** : ಮೂರು ಚಮಚ ಅಮೃತಬಳ್ಳಿ ಕಾಂಡದ ರಸಕ್ಕೆ ಒಂದು ಚಮಚ ಜೇನು ತುಪ್ಪ ಬೆರೆಸಿ ಪ್ರತಿದಿನ ಬೆಳಗ್ಗೆ ಖಾಲಿ ಹೊಟ್ಟೆಯಲ್ಲಿ ಸೇವಿಸಿದರೆ ದೇಹದಲ್ಲಿನ ಸಕ್ಕರೆ ಅಂಶ ಕಡಿಮೆಯಾಗಿ ಮಧುಮೇಹ ಹತೋಟಿಗೆ ಬರುವುದು.

ಆಯುರ್ವೇದ ಔಷಧಿ ತಯಾರಿಕೆಯಲ್ಲಿ ಇದರ ಬಳಕೆ ಹೆಚ್ಚಾಗಿದೆ.

## ಮೂಲಂಗಿ



ಮೂಲಂಗಿಯು ರುಚಿಯಲ್ಲಿ ಖಾರ, ಹಾಗೂ ಘಾಟು ಉಳ್ಳದ್ದಾಗಿದೆ.

ಇದರಲ್ಲಿ ಕಬ್ಬಿಣದ ಅಂಶ, ಕ್ಯಾಲ್ಸಿಯಂಗಳು ಅಧಿಕವಾಗಿವೆ. ಎಲೆಯಲ್ಲಿ 'ಸಿ' ಜೀವಸತ್ವ ಹೆಚ್ಚಾಗಿರುತ್ತದೆ.

ಮೂಲಂಗಿ ಸೊಪ್ಪನ್ನು ಜಜ್ಜಿ ರಸ ತೆಗೆದು, ನಾಲ್ಕು ಚಮಚದಷ್ಟು ರಸವನ್ನು ಬೆಳಗ್ಗೆ ಸೇವನೆ ಮಾಡುವುದರಿಂದ ಮೂತ್ರ ಸಲೀಸಾಗಿ ವಿಸರ್ಜನೆಯಾಗುವುದು, ಮುಟ್ಟಿನ ದೋಷಗಳು ನಿವಾರಣೆಯಾಗುವುದು.

ಹಸಿ ಮೂಲಂಗಿಯನ್ನು ಊಟದ ನಂತರ ಚೆನ್ನಾಗಿ ಜಗಿದು ತಿನ್ನಬೇಕು. ಮೂಲಂಗಿಯ ಪಚಡಿ, ಕೋಸಂಬರಿ ಮಾಡಿ ತಿನ್ನುವುದರಿಂದ ಜೀರ್ಣಶಕ್ತಿ ಸುಧಾರಿಸಿ ಆರೋಗ್ಯ ವೃದ್ಧಿಸುವುದು.

ಮೂಲಂಗಿ ಸೇವನೆಯಿಂದ ಚರ್ಮರೋಗಗಳು ಹಾಗೂ ಮೂಲವ್ಯಾಧಿ ನಿವಾರಣೆಯಾಗುತ್ತದೆ.

ಔಷಧ ತಯಾರಿಕೆಯಲ್ಲಿ ಮೂಲಂಗಿಯನ್ನು ಬಳಸುತ್ತಾರೆ.

ಚೇಳು ಕಚ್ಚಿದವರಿಗೆ ಅದರ ವಿಷ ನಿವಾರಣೆಗೂ ಇದನ್ನು ಉಪಯೋಗಿಸುತ್ತಾರೆ.

## ಹಲಸು



"ಹಸಿದು ಹಲಸು ತಿನ್ನು ಉಂಡು ಮಾವು ತಿನ್ನುವ ಎಂಬ ಗಾದೆ ಮಾತಿನಂತೆ, ಹಲಸು ನಮ್ಮ ದೇಹಕ್ಕೆ ಬೇಕಾದಂತಹ, ಶಕ್ತಿ, ಪೌಷ್ಠಿಕಾಂಶಗಳು ಮತ್ತು ಜೀವಸತ್ವಗಳನ್ನು ನೀಡಬಲ್ಲ ಒಂದು ನೈಸರ್ಗಿಕ ಸಾವಯುವ ಹಣ್ಣು. ಈ ಹಣ್ಣಿನಲ್ಲಿ ಇರುವಂತಹ ನಾರಿನಂಶ ನಮ್ಮ ಜಠರ, ಚಿಕ್ಕಕರುಳು ಮತ್ತು ದೊಡ್ಡಕರುಳನ್ನು ಶುದ್ಧಿ ಮಾಡುವ ಸಾಮರ್ಥ್ಯವಿದೆ. ಹಲಸನ್ನು ಚೆನ್ನಾಗಿ ಹಸಿದು ತಿಂದರೆ, ಜೀರ್ಣಕ್ರಿಯೆ ಉತ್ತಮವಾಗಿರುತ್ತದೆ ಹಾಗೂ ಮಲ-ಮೂತ್ರ ವಿಸರ್ಜನೆ ಸರಾಗವಾಗುತ್ತದೆ. ಹಲಸು ಪೋಷಕಾಂಶಗಳ ಆಗರ ಎಂದೇ ಹೇಳಬಹುದು.

ಹಲಸಿನ ಹಣ್ಣು, ಎಲೆ, ಅಂಟು ಮತ್ತು ಬೇರುಗಳನ್ನು ಔಷಧಿಯಾಗಿ ಉಪಯೋಗಿಸಬಹುದು. ಹಲಸಿನ ಹಣ್ಣಿನಲ್ಲಿರುವ ಅಧಿಕ ಪೊಟ್ಯಾಷಿಯಂ ಅಂಶವು ಅಧಿಕ ರಕ್ತದೊತ್ತಡವನ್ನು ಕಡಿಮೆ ಮಾಡುತ್ತದೆ. ಇದರಲ್ಲಿರುವ ವಿಟಾಮಿನ್-ಸಿ' ಅನ್ನಾಂಗವು ರೋಗನಿರೋಧಕ ಶಕ್ತಿಯನ್ನು ನೀಡುತ್ತದೆ ಹಾಗೂ ಹಲ್ಲನ್ನು ಆರೋಗ್ಯಕರವಾಗಿ ಇಡುತ್ತದೆ. ಕಾಂಡ ಮತ್ತು ಎಲೆಯಿಂದ ಸೋರುವ ಹಾಲನ್ನು ನಾಯಿ ಕಡಿದ ಜಾಗಕ್ಕೆ ಬಳಿದು, ಅದರ ಮೇಲೆ ತಾಮ್ರದ ಕಾಸು ಇಡುವ ರೂಢಿಯನ್ನು ನಮ್ಮ ಗ್ರಾಮೀಣ ಭಾಗಗಳಲ್ಲಿ ನೋಡಬಹುದು. ಇದರ ಹಿಂದೆ ಇರುವ ಔಷಧೀಯ ಗುಣವೆಂದರೆ ಹಲಸಿನಲ್ಲಿ ಇರುವಂತಹ "ಜಾಕಲಿನ್ ಎಂಬ ಅಂಶ. ಇದು ಹಲವು ವಿಧವಾದ ವೈರಸ್‌ಗಳು ಉಲ್ಬಣಗೊಳ್ಳುವುದನ್ನು ತಡೆಯುವ ಗುಣ ಹೊಂದಿದೆ.(ಹರ್‌ಪಿಸ್ ಮತ್ತು ಏಡ್ಸ್ ವೈರಸ್ಸ್‌ಗಳೂ ಕೂಡ ಸೇರಿಕೊಂಡಿವೆ). ಹಲಸಿನ ಬೇರು ಮತ್ತು ಎಲೆಗಳ ಕಷಾಯವನ್ನು ಹಲವು ವಿಧವಾದ ಬ್ಯಾಕ್ಟೀರಿಯಾ ಹಾಗೂ ಪ್ರೋಟೋಜೋವಾ ನಿವಾರಣೆಯಲ್ಲಿ ಬಳಸಿರುವ ಉದಾಹರಣೆಗಳಿವೆ.

ಹಲಸಿನ ಹಣ್ಣಿನಲ್ಲಿರುವ ಲಿಗ್ನಿನ್, ರೈಬೋಫ್ಲೇವಿನ್, ಸಪೋನಿನ್ಸ್, ನೈಯಾಸಿನ್ ಅಂಶಗಳು ಕ್ಯಾನ್ಸರ್ ಮತ್ತು ಅಲ್ಸರ್ ತಡೆಗಟ್ಟುವ ಗುಣ ಹೊಂದಿದೆ.

# ಮಂಕುತಿಮ್ಮನ ಕಗ್ಗ

**ಸಾರ್ವಲೌಕಿಕಸೌಖ್ಯ ನೆಲಸುವನ್ನೆಗಮಿಳೆಯೊ**
**ಳೊರ್ವನುಂ ಸುಖಿಯಲ್ತು, ದಿಟದಿ, ಪೂರ್ಣದಲಿ**
**ಓರ್ವನುಬ್ಬಸದ ಬಿಸಿ ವಿಷವಾಯುವಾಗಿ ತಾ।**
**ನುರ್ವರೆಯ ಮುಸುಕೀತು-ಮಂಕುತಿಮ್ಮ॥**

ಸೌಖ್ಯವೆನ್ನುವುದು ಸಮಸ್ತ ಲೋಕಕ್ಕೂ ನೆಲೆಯಾಗುವವರೆಗೆ ಈ ಭೂಮಿಯಲ್ಲಿ ನಿಜವಾಗಿಯೂ ಯಾರೂ ಪೂರ್ತಿಯಾಗಿಯೂ ಸುಖಿಯಾಗಿರಲು ಸಾಧ್ಯವಿಲ್ಲ. ಒಬ್ಬನ ಉಬ್ಬಸದ ಬಿಸಿ ವಿಷಗಾಳಿಯು ಭೂಮಿಯನ್ನು ಮುಸುಕೀತು' ಎನ್ನುತ್ತದೆ ಈ ಕಗ್ಗ.

ಸಮಾಜದ ಭಾಗವಾಗಿರುವ ನಾವೆಲ್ಲರೂ ಪರಸ್ಪರ ಅವಲಂಬಿತರು. ಯಾರೊಬ್ಬರ ನೆರವೂ ಇಲ್ಲದೆ ಒಂಟಿಯಾಗಿ ಬಾಳುವುದು ಸಾಧ್ಯವಿಲ್ಲ. ಒಂದು ಹಂತದವರೆಗೆ ಮಾತ್ರ ಸ್ವಾವಲಂಬಿ ಬದುಕು ಸಾಧ್ಯ. ಸಮಾಜದಲ್ಲಿ ಒಂದಾದರಷ್ಟೇ ವ್ಯಕ್ತಿಗೆ ಅಸ್ತಿತ್ವ, ನೆಲೆ-ಬೆಲೆ, ಸಮಷ್ಟಿಯ ಹಿತದ ಚಿಂತನೆಯಿಲ್ಲದ ಯಾವುದೇ ಯೋಜನೆಗಳೂ ಯಶಸ್ವಿಯಾಗಲಾರವು.

ಕಣ್ಣು, ಕಿವಿ, ಮೂಗು ಮೊದಲಾದ ಇಂದ್ರಿಯಗಳು ಶರೀರದ ಭಾಗವಾಗಿದ್ದರೂ, ಬೇರೆ ಬೇರೆ ಕೆಲಸಗಳನ್ನು ಮಾಡುತ್ತವೆ. ಅವುಗಳಲ್ಲಿ ಯಾವುದಾದರೂ ಒಂದು ಅಂಗಕ್ಕೆ ತೊಂದರೆಯಾದರೂ ಪೂರ್ತಿ ಶರೀರವೇ ನೋವನ್ನು ಅನುಭವಿಸಬೇಕಾಗುತ್ತದೆ. ಅಂತೆಯೇ ಪ್ರತಿಯೊಬ್ಬ ವ್ಯಕ್ತಿಯೂ ಸಮಾಜದ ಅವಿಭಾಜ್ಯ ಅಂಗ, ಯಾರೊಬ್ಬರಿಗೆ ತೊಂದರೆಯಾದರೂ ಇತರರು ತೊಂದರೆ ಅನುಭವಿಸಬೇಕಾಗುತ್ತದೆ.

ಸಾಮಾನ್ಯವಾಗಿ ಪ್ರತಿಯೊಬ್ಬರೂ ಸ್ವಕೇಂದ್ರಿತರಾಗಿಯೇ ಯೋಚಿಸುತ್ತಾರೆ. ಸ್ವಹಿತವೇ ಮುಖ್ಯವಾಗಿರುತ್ತದೆ. ಲೋಕಹಿತ ಕಡೆಗಣಿಸಲ್ಪಡುತ್ತದೆ. ಆದರೆ ವ್ಯಕ್ತಿಯು ಇತರರಿಗೆ ಒಳಿತನು ಹಾರೈಸದೆ ತನ್ನ ಬದುಕಿನ ಸೌಖ್ಯವನ್ನು ಹೊಂದಲಾಗದು. ಕುಟುಂಬದ ವ್ಯಕ್ತಿಯೊಬ್ಬನಿಗೆ ಆರೋಗ್ಯದ ತೀವ್ರ ಸಮಸ್ಯೆಯುಂಟಾಗಿದೆ ಎಂದಾದರೆ ಕುಟುಂಬದ ಸದಸ್ಯರೆಲ್ಲ ಹತಾಶರಾಗುತ್ತಾರೆ. ಯಾರಿಗೆ ಏನಾದರಾಗಲಿ ತಾನೊಬ್ಬ ಸುಖವಾಗಿದ್ದರೆ ಸಾಕು ಎಂದು ಯೋಚಿಸುವ ಸ್ವಾರ್ಥಿ ಖಂಡಿತ ನೆಮ್ಮದಿಯಿಂದ ಇರಲು ಸಾಧ್ಯವಿಲ್ಲ. ವಿಶ್ವದ ಯಾವುದೋ ಮೂಲೆಯಲ್ಲಿರುವ ದೇಶವು ಪ್ರಾಕೃತಿಕ ವೈಪರೀತ್ಯಕ್ಕೆ ಸಿಲುಕಿ ನಲುಗಿದರೆ ಅಥವಾ ಸ್ವಾರ್ಥಪೂರಿತ ಹೊಣೆಗೇಡಿ ನಿರ್ಧಾರ ಮಾಡಿದರೆ ಉಳಿದ ದೇಶಗಳು ನಿರಾಳವಾಗಿ ಇರಲಾಗದು. ಆ ದೇಶಕ್ಕಾದ ಹಾನಿ ಉಳಿದ ದೇಶಗಳಿಗೂ ತಟ್ಟುತ್ತದೆ. ಹಾಗಾಗಿ ಸಮಸ್ತ ಲೋಕಕ್ಕೂ ಸೌಖ್ಯ ನೆಲೆಯಾಗುವವರೆಗೆ ಯಾರೊಬ್ಬರೂ ಈ ಭೂಮಿಯಲ್ಲಿ ಸುಖವಾಗಿರಲು ಸಾಧ್ಯವಿಲ್ಲ.

ಆಕಸ್ಮಿಕಗಳು ಸಂಭವಿಸಿದಾಗ ನೆರವು-ಸಾಂತ್ವನಗಳು ವಿಶ್ವದೆಲ್ಲೆಡೆಯಿಂದ ಹರಿದುಬರುತ್ತವೆ. ಈ ಬಗೆಯ ಭಾವಸ್ಪಂದನಕ್ಕೆ ಪರಿಚಿತ-ಅಪರಿಚಿತ, ದೂರ-ಹತ್ತಿರ ಎಂಬ ಭೇದವಿಲ್ಲ. ಸಾವು-ನೋವುಗಳು ಜನರ ಹೃದಯವನ್ನು ಕಲಕಿ ಅವರನ್ನು ಒಗ್ಗೂಡಿಸುತ್ತವೆ. ಯಾಕೆಂದರೆ ವ್ಯಕ್ತಿ ಸಂಪೂರ್ಣವಾಗಿ ಜಗತ್ತಿನಿಂದ ಪ್ರತ್ಯೇಕತೆ ಸಾಧಿಸಲಾರ. ಲೋಕದಲ್ಲಿ ಎಲ್ಲವೂ ಒಂದಕ್ಕೊಂದು ಸಂಬಂಧಿಸಿವೆ. ಅವಲಂಬಿಸಿವೆ. ಹಲವು ದಳಗಳು ಜತೆಗೂಡಿದರೆ ಸುಂದರವಾದ ಹೂವು, ದಳಗಳನ್ನೆಲ್ಲ ಪ್ರತ್ಯೇಕಿಸುತ್ತ ಹೋದರೆ ಹೂವು ಹೂವಾಗಿರದು.

ಭೂಮಿಯ ಬಾಳುವೆಯಲ್ಲಿ ಒಬ್ಬಾತನ ಉಬ್ಬಸದ ವಿಷಗಾಳಿ ಎಲ್ಲರ ಬದುಕನ್ನು ಸೋಕಿ ನರಳಿಸಬಲ್ಲುದು. ಅಂದರೆ ವ್ಯಕ್ತಿಯೊಬ್ಬನ ಅಸಹನೀಯ ನೋವು ಅಥವಾ ಕೆಡುಕಿನ ಯೋಚನೆಗಳು ಪೂರ್ತಿ ಸಮಾಜವನ್ನೇ ಬಾಧಿಸುತ್ತವೆ. ಕುಟುಂಬದಲ್ಲಿ ಒಬ್ಬ ವ್ಯಕ್ತಿಯ ಸಣ್ಣತನವು ಒಟ್ಟು ಕುಟುಂಬದ ಸಾಮರಸ್ಯಕ್ಕೆ ದಕ್ಕೆಯುಂಟುಮಾಡುತ್ತದೆ. ಆದುದರಿಂದ ಜೀವನದ ಸೌಖ್ಯವೆನ್ನುವುದು ಸುಖ ಸಾಧನಗಳಿಂದಲೋ, ಸೌಲಭ್ಯಗಳಿಂದಲೋ ಪ್ರಾಪ್ತವಾಗುವುದಿಲ್ಲ. ಸ್ವಹಿತವು ಲೋಕಹಿತದಲ್ಲಿದೆ ಎಂಬ ಅರಿವು ಪ್ರತಿಯೋರ್ವರಲ್ಲೂ ಮೂಡಬೇಕು. ಸ್ವಂತ ಮುಕ್ತಿಗಾಗಿ ಸಾಧನೆ ಮಾಡುವುದರೊಂದಿಗೆ ಜಗತ್ತಿನ ಹಿತಕ್ಕಾಗಿಯೂ ಶ್ರಮಿಸಬೇಕು ಎನ್ನುವ ಧ್ಯೇಯವು ಸಮಾಜದ ಉಸಿರಾದಾಗ ಭೂಮಿಯಲ್ಲಿ ಶಾಂತಿ-ನೆಮ್ಮದಿಯು ನೆಲೆಯಾದೀತು.

## ಗುರುವೆಂಬ ದೈವ


ಮಾತೃದೇವೋಭವ, ಪಿತೃ ದೇವೋಭವ, ಆಚಾರ್ಯದೇವೋಭವ, ಇವರು ಎಲ್ಲರ ಬಾಳಿನಲ್ಲಿ ಕಣ್ಣಿಗೆ ಕಾಣುವ ದೈವ ಸ್ವರೂಪಿ ಚೈತನ್ಯಗಳು. ನಮ್ಮ ಜೀವನದಲ್ಲಿ ತಂದೆ ತಾಯಿ ನಂತರದ ಸ್ಥಾನ ಗುರುವಿಗೆ ಮೀಸಲು. ಮನುಷ್ಯನ ಸರ್ವತೋಮುಖ ಬೆಳವಣಿಗೆಯಲ್ಲಿ ಗುರುವಿನ ಪಾತ್ರ ತುಂಬಾ ಹಿರಿದಾದದ್ದು. "ಮನೆಯೇ ಮೊದಲ ಪಾಠಶಾಲೆ ತಾಯಿಯೇ ಮೊದಲ ಗುರು" ಎಂಬ ನಾಣ್ಣುಡಿ ಸತ್ಯವಾದರೂ, ಮನುಷ್ಯ ತಾಯಿಯ ಮಡಿಲಿನಿಂದ ಹೊರಬಂದು ಪ್ರಾಪಂಚಿಕ ಜ್ಞಾನ, ವಿದ್ಯೆ, ಸಂಸ್ಕಾರ ಕಲಿಯುವಲ್ಲಿ ಗುರುವಿನ ಪಾತ್ರವೂ ಅಷ್ಟೇ ಮುಖ್ಯವಾಗಿರುತ್ತದೆ.

"ಗುರಿವಿನ ಗುಲಾಮನಾಗುವ ತನಕ ದೊರೆಯದಣ್ಣ ಮುಕುತಿ" ಎಂಬ ದಾಸವಾಣಿಯಂತೆ, ಮನುಷ್ಯನ ಜೀವನ ಪರಿಪೂರ್ಣತೆಗೆ, ಬಾಳ ಬುನಾದಿಯ ಭದ್ರತೆಗೆ, ಉತ್ತಮ ಗುರುವಿನ ಮಾರ್ಗದರ್ಶನ, ಸಲಹೆ, ಬೋಧನೆಯೂ ಸಹ ಪ್ರಮುಖ ಪಾತ್ರ ವಹಿಸುತ್ತದೆ. ಒಬ್ಬ ವ್ಯಕ್ತಿ ಜೀವನದಲ್ಲಿ ಸಾಮಾಜಿಕವಾಗಿ, ಆರ್ಥಿಕವಾಗಿ, ಎಷ್ಟೇ ಸಾಧನೆ ಮಾಡಿದರೂ ಆ ಏಳಿಗೆಯ ಹಿಂದಿನ ಮೂಲ ಒಬ್ಬ ಗುರು ಎಂದರೆ ತಪ್ಪಾಗಲಾರದು. "ಜೀವನದಲ್ಲಿ ಮುಂದೆ ಒಂದು ಒಳ್ಳೆಯ ಗುರಿ ಇರಬೇಕು, ಹಿಂದೆ ಒಬ್ಬ ಒಳ್ಳೆಯ ಗುರು ಇರಬೇಕು" ಎಂಬುದು ಅನುಭವದ ಮಾತು.

ಗುರು ಎಂದಾಕ್ಷಣ ಕೇವಲ ಶೈಕ್ಷಣಿಕವಾಗಿ ಮಾತ್ರವಲ್ಲದೇ, ನೈತಿಕವಾಗಿ, ಆಧ್ಯಾತ್ಮಿಕವಾಗಿ ತನ್ನಲ್ಲಿರುವ ಜ್ಞಾನವನ್ನು ಇತರರಲ್ಲಿ ಹಂಚಿ, ಬೇರೆಯವರ ಉನ್ನತಿಗೆ ಕಾರಣವಾಗುವ ಪ್ರತಿಯೊಬ್ಬರು ಗುರುವಿನ ಸ್ಥಾನ ಪಡೆಯುತ್ತಾರೆ. ತನ್ನ ಒಬ್ಬ ಶಿಷ್ಯ ತನಗಿಂತ ಹೆಚ್ಚು ಜ್ಞಾನಿಯಾಗಿ ಜೀವನದಲ್ಲಿ ಉನ್ನತಿ ಸಾಧಿಸಿದಾಗ ತಾನೇ ಸಾಧಿಸಿದ ಹಾಗೆ ಹೆಮ್ಮೆ ಪಡುವ ಏಕೈಕ ಜೀವವೆಂದರೆ ಅದು ಗುರು ಮಾತ್ರ. ತನ್ನ ಶಿಷ್ಯನಿಂದ ಒಬ್ಬ ಗುರು ಬಯಸುವ ಪ್ರತಿಫಲ ಅಷ್ಟು ಮಾತ್ರ.

ಆದರೆ ಇಂದಿನ ದಿನಗಳಲ್ಲಿ ಸಾಮಾಜಿಕ ಜಾಲತಾಣದ ಅತಿಯಾದ ಬಳಕೆ ಹಾಗೂ ಆನ್‌ಲೈನ್ ತರಗತಿ ಪದ್ಧತಿಯಿಂದ ಪರಸ್ಪರ ಸಂವಹನದ ಕೊರತೆ ಉಂಟಾಗಿ ಗುರು-ಶಿಷ್ಯರ ನಡುವಿನ ಸಂಬಂಧಗಳೂ ಸಹ ಕಾಲಕ್ರಮೇಣ ಸಂಕುಚಿತಗೊಳ್ಳುತ್ತಿರುವುದು ವಿಪರ್ಯಾಸವೇ ಸರಿ.

ಸೆಪ್ಟೆಂಬರ್-೦೫ "ಶಿಕ್ಷಕರ ದಿನಾಚರಣೆ" ಯ ಅಂಗವಾಗಿ, ಗುರುವಿನ ಸ್ಥಾನದಲ್ಲಿರುವ ಪ್ರತಿಯೊಬ್ಬರಿಗೂ ನನ್ನ ಪ್ರಣಾಮಗಳನ್ನು ಸಲ್ಲಿಸುತ್ತಾ, ಈ ಲೇಖನವನ್ನು ಸಮಸ್ತ ಗುರುವೃಂದಕ್ಕೆ ಅರ್ಪಣೆ ಮಾಡಬಯಸುತ್ತೇನೆ.



**ಶ್ರೀಮತಿ ಭಾರತಿ ಎನ್.ಸಿ**
ಕಿರಿಯ ಸಹಾಯಕಿ, ಕಾ ಮತ್ತು ಪಾ ವಿಭಾಗ ಕಛೇರಿ
ಬೆವಿಕಂ, ಹಿರಿಯೂರು, ಚಿತ್ರದುರ್ಗ ಜಿಲ್ಲೆ

# 2021

## ಜನವರಿ

| | | | | | |
|---|---|---|---|---|---|
| ಭಾನು | 31 | 3 | 10 | 17 | 24 |
| ಸೋಮ | | 4 | 11 | 18 | 25 |
| ಮಂಗಳ | | 5 | 12 | 19 | 26 ಗಣರಾಜ್ಯೋತ್ಸವ |
| ಬುಧ | | 6 | 13 | 20 | 27 |
| ಗುರು | | 7 | 14 ಮಕರ ಸಂಕ್ರಾಂತಿ | 21 | 28 |
| ಶುಕ್ರ | 1 | 8 | 15 | 22 | 29 |
| ಶನಿ | 2 | 9 ಎರಡನೇ ಶನಿವಾರ | 16 | 23 ನಾಲ್ಕನೇ ಶನಿವಾರ | 30 |

## ಫೆಬ್ರವರಿ

| | | | | | |
|---|---|---|---|---|---|
| ಭಾನು | | 7 | 14 | 21 | 28 |
| ಸೋಮ | 1 | 8 | 15 | 22 | |
| ಮಂಗಳ | 2 | 9 | 16 | 23 | |
| ಬುಧ | 3 | 10 | 17 | 24 | |
| ಗುರು | 4 | 11 | 18 | 25 | |
| ಶುಕ್ರ | 5 | 12 | 19 | 26 | |
| ಶನಿ | 6 | 13 ಎರಡನೇ ಶನಿವಾರ | 20 | 27 ನಾಲ್ಕನೇ ಶನಿವಾರ | |

## ಮಾರ್ಚ್

| | | | | | |
|---|---|---|---|---|---|
| ಭಾನು | | 7 | 14 | 21 | 28 |
| ಸೋಮ | 1 | 8 | 15 | 22 | 29 |
| ಮಂಗಳ | 2 | 9 | 16 | 23 | 30 |
| ಬುಧ | 3 | 10 | 17 | 24 | 31 |
| ಗುರು | 4 | 11 ಮಹಾಶಿವರಾತ್ರಿ | 18 | 25 | |
| ಶುಕ್ರ | 5 | 12 | 19 | 26 | |
| ಶನಿ | 6 | 13 ಎರಡನೇ ಶನಿವಾರ | 20 | 27 ನಾಲ್ಕನೇ ಶನಿವಾರ | |

## ಏಪ್ರಿಲ್

| | | | | | |
|---|---|---|---|---|---|
| ಭಾನು | | 4 | 11 | 18 | 25 ಮಹಾವೀರ ಜಯಂತಿ |
| ಸೋಮ | | 5 | 12 | 19 | 26 |
| ಮಂಗಳ | | 6 | 13 ಯುಗಾದಿ | 20 | 27 |
| ಬುಧ | | 7 | 14 ಡಾ.ಅಂಬೇಡ್ಕರ್ ಜಯಂತಿ | 21 | 28 |
| ಗುರು | 1 | 8 | 15 | 22 | 29 |
| ಶುಕ್ರ | 2 ಗುಡ್‌ಫ್ರೈಡೇ | 9 | 16 | 23 | 30 |
| ಶನಿ | 3 | 10 ಎರಡನೇ ಶನಿವಾರ | 17 | 24 ನಾಲ್ಕನೇ ಶನಿವಾರ | |

## ಮೇ

| | | | | | |
|---|---|---|---|---|---|
| ಭಾನು | 30 | 2 | 9 | 16 | 23 |
| ಸೋಮ | 31 | 3 | 10 | 17 | 24 |
| ಮಂಗಳ | | 4 | 11 | 18 | 25 |
| ಬುಧ | | 5 | 12 | 19 | 26 |
| ಗುರು | | 6 | 13 | 20 | 27 |
| ಶುಕ್ರ | | 7 | 14 ಬಸವ ಜಯಂತಿ/ರಂಜಾನ್ | 21 | 28 |
| ಶನಿ | 1 ಮೇ ಡೇ | 8 ಎರಡನೇ ಶನಿವಾರ | 15 | 22 ನಾಲ್ಕನೇ ಶನಿವಾರ | 29 |

## ಜೂನ್

| | | | | | |
|---|---|---|---|---|---|
| ಭಾನು | | 6 | 13 | 20 | 27 |
| ಸೋಮ | | 7 | 14 | 21 | 28 |
| ಮಂಗಳ | 1 | 8 | 15 | 22 | 29 |
| ಬುಧ | 2 | 9 | 16 | 23 | 30 |
| ಗುರು | 3 | 10 | 17 | 24 | |
| ಶುಕ್ರ | 4 | 11 | 18 | 25 | |
| ಶನಿ | 5 | 12 ಎರಡನೇ ಶನಿವಾರ | 19 | 26 ನಾಲ್ಕನೇ ಶನಿವಾರ | |

## ಜುಲೈ

| | | | | | |
|---|---|---|---|---|---|
| ಭಾನು | | 4 | 11 | 18 | 25 |
| ಸೋಮ | | 5 | 12 | 19 | 26 |
| ಮಂಗಳ | | 6 | 13 | 20 | 27 |
| ಬುಧ | | 7 | 14 | 21 ಬಕ್ರೀದ್ | 28 |
| ಗುರು | 1 | 8 | 15 | 22 | 29 |
| ಶುಕ್ರ | 2 | 9 | 16 | 23 | 30 |
| ಶನಿ | 3 | 10 ಎರಡನೇ ಶನಿವಾರ | 17 | 24 ನಾಲ್ಕನೇ ಶನಿವಾರ | 31 |

## ಆಗಸ್ಟ್

| | | | | | |
|---|---|---|---|---|---|
| ಭಾನು | 1 | 8 | 15 ಸ್ವಾತಂತ್ರ್ಯ ದಿನಾಚರಣೆ | 22 | 29 |
| ಸೋಮ | 2 | 9 | 16 | 23 | 30 |
| ಮಂಗಳ | 3 | 10 | 17 | 24 | 31 |
| ಬುಧ | 4 | 11 | 18 | 25 | |
| ಗುರು | 5 | 12 | 19 | 26 | |
| ಶುಕ್ರ | 6 | 13 | 20 ಮೊಹರಾಂ | 27 | |
| ಶನಿ | 7 | 14 ಎರಡನೇ ಶನಿವಾರ | 21 | 28 ನಾಲ್ಕನೇ ಶನಿವಾರ | |

## ಸೆಪ್ಟೆಂಬರ್

| | | | | | |
|---|---|---|---|---|---|
| ಭಾನು | | 5 | 12 | 19 | 26 |
| ಸೋಮ | | 6 | 13 | 20 | 27 |
| ಮಂಗಳ | | 7 | 14 | 21 | 28 |
| ಬುಧ | 1 | 8 | 15 | 22 | 29 |
| ಗುರು | 2 | 9 | 16 | 23 | 30 |
| ಶುಕ್ರ | 3 | 10 ಗಣೇಶ ಚತುರ್ಥಿ | 17 | 24 | |
| ಶನಿ | 4 | 11 ಎರಡನೇ ಶನಿವಾರ | 18 | 25 ನಾಲ್ಕನೇ ಶನಿವಾರ | |

## ಅಕ್ಟೋಬರ್

| | | | | | |
|---|---|---|---|---|---|
| ಭಾನು | 31 | 3 | 10 | 17 | 24 |
| ಸೋಮ | | 4 | 11 | 18 | 25 |
| ಮಂಗಳ | | 5 | 12 | 19 ಈದ್-ಮಿಲಾದ್ | 26 |
| ಬುಧ | | 6 ಮಹಾಲಯ ಅಮಾವಾಸ್ಯೆ | 13 | 20 ವಾಲ್ಮೀಕಿ ಜಯಂತಿ | 27 |
| ಗುರು | | 7 | 14 ಮಹಾನವಮಿ ಆಯುಧಪೂಜಾ | 21 | 28 |
| ಶುಕ್ರ | 1 | 8 | 15 ವಿಜಯದಶಮಿ | 22 | 29 |
| ಶನಿ | 2 ಗಾಂಧಿಜಯಂತಿ | 9 ಎರಡನೇ ಶನಿವಾರ | 16 | 23 ನಾಲ್ಕನೇ ಶನಿವಾರ | 30 |

## ನವೆಂಬರ್

| | | | | | |
|---|---|---|---|---|---|
| ಭಾನು | | 7 | 14 | 21 | 28 |
| ಸೋಮ | 1 ಕನ್ನಡ ರಾಜ್ಯೋತ್ಸವ | 8 | 15 | 22 ಕನಕದಾಸ ಜಯಂತಿ | 29 |
| ಮಂಗಳ | 2 | 9 | 16 | 23 | 30 |
| ಬುಧ | 3 ನರಕಚತುರ್ದಶಿ | 10 | 17 | 24 | |
| ಗುರು | 4 | 11 | 18 | 25 | |
| ಶುಕ್ರ | 5 ಬಲಿಪಾಡ್ಯಮಿ | 12 | 19 | 26 | |
| ಶನಿ | 6 | 13 ಎರಡನೇ ಶನಿವಾರ | 20 | 27 ನಾಲ್ಕನೇ ಶನಿವಾರ | |

## ಡಿಸೆಂಬರ್

| | | | | | |
|---|---|---|---|---|---|
| ಭಾನು | | 5 | 12 | 19 | 26 |
| ಸೋಮ | | 6 | 13 | 20 | 27 |
| ಮಂಗಳ | | 7 | 14 | 21 | 28 |
| ಬುಧ | 1 | 8 | 15 | 22 | 29 |
| ಗುರು | 2 | 9 | 16 | 23 | 30 |
| ಶುಕ್ರ | 3 | 10 | 17 | 24 | 31 |
| ಶನಿ | 4 | 11 ಎರಡನೇ ಶನಿವಾರ | 18 | 25 ಕ್ರಿಸ್‌ಮಸ್ | |



## ಸಂಪಾದಕ ಮಂಡಳಿ


| | |
|---|---|
| **ಶ್ರೀ ಎಂ.ಬಿ.ರಾಜೇಶ್‌ಗೌಡ,** ವ್ಯವಸ್ಥಾಪಕ ನಿರ್ದೇಶಕರು | ಅಧ್ಯಕ್ಷರು |
| **ಶ್ರೀ ಡಾ. ಆರ್.ಸಿ.ಚೇತನ್,** ನಿರ್ದೇಶಕರು (ಹಣಕಾಸು) | ಮುಖ್ಯ ಸಂಪಾದಕರು |
| **ಶ್ರೀ ಜಿ.ಅಶೋಕ್ ಕುಮಾರ್,** ನಿರ್ದೇಶಕರು (ತಾಂತ್ರಿಕ) | ಮುಖ್ಯ ಸಂಪಾದಕರು |
| **ಶ್ರೀ ಸೋಮಶೇಖರ್ ಬಿ.ಆರ್.** ಪ್ರಧಾನ ವ್ಯವಸ್ಥಾಪಕರು (ಗ್ರಾ.ಸಂ.) | ಸಂಪಾದಕರು |
| **ಶ್ರೀ ಕೆ. ತಿಪ್ಪೇಸ್ವಾಮಿ,** ಪ್ರಧಾನ ಕಾರ್ಯದರ್ಶಿ, ಕವಿಮಂ ಇಂಜಿನಿಯರುಗಳ ಸಂಘ | ಸದಸ್ಯರು |
| **ಶ್ರೀ ಕೆ. ಬಲರಾಮ್,** ಪ್ರಧಾನ ಕಾರ್ಯದರ್ಶಿ, ಕವಿಪ್ರನಿನಿ ನೌಕರರ ಸಂಘ | ಸದಸ್ಯರು |
| **ಶ್ರೀ ರಾಮಚಂದ್ರರೆಡ್ಡಿ,** ಪ್ರಧಾನ ಕಾರ್ಯದರ್ಶಿ, ಕವಿಪ್ರನಿನಿ ಲೆಕ್ಕಾಧಿಕಾರಿಗಳ ಸಂಘ | ಸದಸ್ಯರು |
| **ಶ್ರೀ ಎಂ. ರವೀಂದ್ರ,** ಕವಿಪ್ರನಿನಿ ಎಸ್ಸಾಂಗಳ ಪ.ಜಾತಿ ಮತ್ತು ವರ್ಗದವರ ಅಧಿಕಾರಿಗಳ ಸಂಘ | ಸದಸ್ಯರು |
| **ಶ್ರೀ ಕುಮಾರ್ ಮುದ್ದಣ್ಣನವರ್,** ಪ್ರಧಾನ ಕಾರ್ಯದರ್ಶಿ, ಕವಿಪ್ರನಿನಿ ಡಿಪ್ಲೋಮಾ ಇ. ಸಂಘ | ಸದಸ್ಯರು |


## ಮನವಿ

**ಬೆಸ್ಕಾಂ ಸ್ನೇಹಿ** ಗೃಹಪತ್ರಿಕೆಯಲ್ಲಿ ಪ್ರಕಟಣೆಗಾಗಿ ನಿಮ್ಮ ಅಭಿಪ್ರಾಯ, ಸಲಹೆ, ಲೇಖನ, ಕಛೇರಿಯಲ್ಲಿ ಏರ್ಪಡಿಸಿದ ಕಾರ್ಯಕ್ರಮ, ಸಮಾರಂಭಗಳ ಬಗ್ಗೆ ವರದಿಗಳು, ಅಧಿಕಾರಿ / ಸಿಬ್ಬಂದಿ ವರ್ಗದವರ ಸಾಧನೆಗಳ ಬಗ್ಗೆ ಮಾಹಿತಿಗಳನ್ನು ಕಳುಹಿಸಬೇಕಾದ


ವಿಳಾಸ : **ಪ್ರಧಾನ ವ್ಯವಸ್ಥಾಪಕರು (ಗ್ರಾ.ಸಂ.) ನಿಗಮ ಕಾರ್ಯಾಲಯ, ಬೆ.ವಿ.ಕಂಪನಿ, ಕೆ.ಆರ್.ವೃತ್ತ, ಬೆಂಗಳೂರು-560 001.**
ಇ-ಮೇಲ್ ವಿಳಾಸ : gmcr@bescom.co.in


**ವಿದ್ಯುತ್ ಸಂಬಂಧಿತ ಯಾವುದೇ ಸಹಾಯಕ್ಕಾಗಿ 24 ಗಂಟೆಗಳ ಸಹಾಯವಾಣಿ 1912**
**ಸಂದೇಶ ಕಳುಹಿಸಿ 58888 ವೆಬ್‌ಸೈಟ್.**